ಕರ್ನಾಟಕ ವಿಧಾನ ಪರಿಷತ್ತು
ನೂರ ಐವತ್ತಾರನೆಯ ಅಧಿವೇಶನ

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2025

(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–57)

(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ 27)ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ 27)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.- (1) ಈ ಅಧಿನಿಯಮವನ್ನು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಅನ್ಯಥಾ ಉಪಬಂಧಿಸಿದುದನ್ನುಳಿದು, ಈ ಅಧಿನಿಯಮದ ಉಪಬಂಧಗಳು ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದ ಅಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

2. ಪ್ರಕರಣ 2ರ ತಿದ್ದುಪಡಿ.- ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ 27)ರ (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 2ನೇ ಪ್ರಕರಣದಲ್ಲಿ,-

(i) ಖಂಡ 61ರಲ್ಲಿ "ಪ್ರಕರಣ 9ರ ಉಪಪ್ರಕರಣ (3) ಅಥವಾ ಉಪಪ್ರಕರಣ (4)ರ" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳ ಬದಲಿಗೆ "ಈ ಅಧಿನಿಯಮ ಅಥವಾ ಸಂಯೋಜಿತ ಸರಕು ಮತ್ತು ಸೇವೆಗಳ ಅಧಿನಿಯಮ, 2017(2017ರ ಕೇಂದ್ರ ಅಧಿನಿಯಮ ಸಂ.13)ರ ಪ್ರಕರಣ 5ರ ಉಪಪ್ರಕರಣ (3) ಅಥವಾ ಉಪಪ್ರಕರಣ (4)ರ" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳನ್ನು 2025ರ ಏಪ್ರಿಲ್ 1ನೇ ದಿನಾಂಕದಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಿರುವುದಾಗಿ ಭಾವಿಸತಕ್ಕದ್ದು;

(ii) ಖಂಡ 69ರಲ್ಲಿ,-

(ಎ) ಖಂಡ (ಸಿ) ಯಲ್ಲಿ "ಪೌರಾಡಳಿತ" ಎಂಬ ಪದದ ತರುವಾಯ "ನಿಧಿಯ" ಎಂಬ ಪದವನ್ನು ಸೇರಿಸತಕ್ಕದ್ದು;

(ಬಿ) ಖಂಡ (ಸಿ) ಯ ತರುವಾಯ ಈ ಮುಂದಿನ ವಿವರಣೆಯನ್ನು ಸೇರಿಸತಕ್ಕದ್ದು, ಎಂದರೆ:-

"**ವಿವರಣೆ:-** ಈ ಉಪ-ಖಂಡದ ಉದ್ದೇಶಗಳಿಗಾಗಿ,-

(i) "ಸ್ಥಳೀಯ ನಿಧಿ" ಎಂದರೆ ಪಂಚಾಯತಿ ಪ್ರದೇಶಕ್ಕೆ ಸಂಬಂಧಿಸಿದಂತೆ ನಾಗರಿಕ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಮತ್ತು ಯಾವುದೇ ಹೆಸರಿನಿಂದ ಕರೆಯಲಾಗುವ ಯಾವುದೇ ಯುಕ್ತ ತೆರಿಗೆ, ಕರ, ಸುಂಕ, ಉಪಕರ ಅಥವಾ ಶುಲ್ಕವನ್ನು ವಿಧಿಸಲು, ಸಂಗ್ರಹಿಸಲು ಸ್ಥಾಪಿಸಲಾದ ಸ್ಥಳೀಯ ಸ್ವಯಮಾಡಳಿತ ಪ್ರಾಧಿಕಾರದ ನಿಯಂತ್ರಣ ಅಥವಾ ವ್ಯವಸ್ಥಾಪನೆಯಡಿಯಲ್ಲಿನ ಯಾವುದೇ ನಿಧಿ;

(ii) "ಪೌರಾಡಳಿತ ನಿಧಿ" ಎಂದರೆ ಮಹಾನಗರ ಪ್ರದೇಶ ಅಥವಾ ಪೌರ ಪ್ರದೇಶಕ್ಕೆ ಸಂಬಂಧಿಸಿದಂತೆ ನಾಗರಿಕ ಪ್ರಕಾರ್ಯಗಳನ್ನು ನೆರವೇರಿಸುವುದಕ್ಕಾಗಿ ಮತ್ತು ಯಾವುದೇ ಹೆಸರಿನಿಂದ ಕರೆಯಲಾಗುವ ಯಾವುದೇ ಯುಕ್ತ ತೆರಿಗೆ, ಕರ, ಸುಂಕ, ಉಪಕರ ಅಥವಾ ಶುಲ್ಕವನ್ನು ವಿಧಿಸಲು, ಸಂಗ್ರಹಿಸಲು ಸ್ಥಾಪಿಸಲಾದ ಸ್ಥಳೀಯ ಸ್ವಯಮಾಡಳಿತ ಪ್ರಾಧಿಕಾರದ ನಿಯಂತ್ರಣ ಅಥವಾ ವ್ಯವಸ್ಥಾಪನೆಯಡಿಯಲ್ಲಿನ ಯಾವುದೇ ನಿಧಿ."

(iii) ಖಂಡ (116)ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(116ಎ) "ವಿಶಿಷ್ಟ ಗುರುತು ಛಾಪನೆ" ಎಂದರೆ 148ಎ ಪ್ರಕರಣದ ಉಪ-ಪ್ರಕರಣ (2)ರ (ಬಿ) ಖಂಡದಲ್ಲಿ ಉಲ್ಲೇಖಿಸಿದ ವಿಶಿಷ್ಟ ಗುರುತು ಛಾಪನೆ ಹಾಗೂ ನಿರ್ದಿಷ್ಟವಾದ, ಭದ್ರತಾ ಮತ್ತು ಅಳಿಸಲಾಗದ ಡಿಜಿಟಲ್ ಸ್ಟ್ಯಾಂಪು, ಡಿಜಿಟಲ್ ಗುರುತು ಅಥವಾ ಯಾವುದೇ ಇತರ ಗುರುತನ್ನು ಒಳಗೊಳ್ಳುವುದು;"

3. ಪ್ರಕರಣ 12ರ ತಿದ್ದುಪಡಿ.- ಮೂಲ ಅಧಿನಿಯಮದ ಪ್ರಕರಣ 12ರಲ್ಲಿನ ಉಪ-ಪ್ರಕರಣ (4)ನ್ನು ತೆಗೆದುಹಾಕತಕ್ಕದ್ದು.

4. ಪ್ರಕರಣ 13ರ ತಿದ್ದುಪಡಿ.- ಮೂಲ ಅಧಿನಿಯಮದ ಪ್ರಕರಣ 13ರಲ್ಲಿನ ಉಪ-ಪ್ರಕರಣ (4)ನ್ನು ತೆಗೆದುಹಾಕತಕ್ಕದ್ದು.

5. ಪ್ರಕರಣ 17ರ ತಿದ್ದುಪಡಿ.- ಮೂಲ ಅಧಿನಿಯಮದ ಪ್ರಕರಣ 17ರ ಉಪ-ಪ್ರಕರಣ (5)ರಲ್ಲಿನ (ಡಿ) ಖಂಡದಲ್ಲಿ,-

(i) "ಸ್ಥಾವರ ಅಥವಾ ಯಂತ್ರೋಪಕರಣಗಳನ್ನು" ಎಂಬ ಪದಗಳ ಬದಲಾಗಿ "ಸ್ಥಾವರ ಮತ್ತು ಯಂತ್ರೋಪಕರಣಗಳನ್ನು" ಎಂಬ ಪದಗಳನ್ನು 2017ರ ಜುಲೈ 1ನೇ ದಿನಾಂಕದಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಿರುವುದಾಗಿ ಭಾವಿಸತಕ್ಕದ್ದು;

(ii) ಈಗಾಗಲೇ ಇರುವ ವಿವರಣೆಯನ್ನು ವಿವರಣೆ 1 ಎಂಬ ಸಂಖ್ಯೆಯನ್ನು ನೀಡತಕ್ಕದ್ದು ಮತ್ತು ಹಾಗೆ ಸಂಖ್ಯೆ ನೀಡಲಾದ ವಿವರಣೆ 1ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**ವಿವರಣೆ 2.-** (ಡಿ) ಖಂಡದ ಉದ್ದೇಶಕ್ಕಾಗಿ, ಯಾವುದೇ ತೀರ್ಪು, ಡಿಕ್ರಿ ಅಥವಾ ಯಾವುದೇ ನ್ಯಾಯಾಲಯ, ನ್ಯಾಯಾಧಿಕರಣ ಅಥವಾ ಇತರ ಪ್ರಾಧಿಕಾರದ ಆದೇಶಕ್ಕೆ ವಿರುದ್ಧವಾದುದು ಏನೇ ಒಳಗೊಂಡಿದ್ದರೂ, "ಸ್ಥಾವರ ಅಥವಾ ಯಂತ್ರೋಪಕರಣಗಳು" ಎಂಬ ಯಾವುದೇ ಉಲ್ಲೇಖವು "ಸ್ಥಾವರ ಅಥವಾ ಯಂತ್ರೋಪಕರಣಗಳು" ಎಂಬುದರ ಉಲ್ಲೇಖವೆಂದು ಅರ್ಥೈಸತಕ್ಕದ್ದು ಹಾಗೂ ಯಾವಾಗಲೂ ಹಾಗೆ ಉಲ್ಲೇಖಿಸಲಾಗಿದೆ ಎಂಬುದನ್ನು ಅರ್ಥೈಸತಕ್ಕದ್ದೆಂದು ಈ ಮೂಲಕ ಸ್ಪಷ್ಟೀಕರಿಸಲಾಗಿದೆ."

6. ಪ್ರಕರಣ 20ರ ತಿದ್ದುಪಡಿ.- ಮೂಲ ಅಧಿನಿಯಮದ ಪ್ರಕರಣ 20ರ ಉಪ-ಪ್ರಕರಣರಲ್ಲಿ,-

(i) ಉಪ-ಪ್ರಕರಣ (1)ರಲ್ಲಿ, "ಪ್ರಕರಣ 9ರ ಉಪಪ್ರಕರಣ (3) ಅಥವಾ ಉಪಪ್ರಕರಣ (4)ರ" ಎಂಬ ಪದಗಳು, ಅಂಕಿಗಳ ಮತ್ತು ಆವರಣ ಚಿಹ್ನೆಗಳ ಬದಲಿಗೆ "ಈ ಅಧಿನಿಯಮ ಅಥವಾ ಸಂಯೋಜಿತ ಸರಕು ಮತ್ತು ಸೇವೆಗಳ ಅಧಿನಿಯಮ, 2017(2017ರ ಕರ್ನಾಟಕ ಅಧಿನಿಯಮ 27)ರ ಪ್ರಕರಣ 5ರ ಉಪಪ್ರಕರಣ (3) ಅಥವಾ ಉಪಪ್ರಕರಣ (4)ರ" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳನ್ನು 2025ರ ಏಪ್ರಿಲ್ 1ನೇ ದಿನಾಂಕದಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಿರುವುದಾಗಿ ಭಾವಿಸತಕ್ಕದ್ದು;

(ii) ಉಪ-ಪ್ರಕರಣ (2)ರಲ್ಲಿ, "ಪ್ರಕರಣ 9ರ ಉಪಪ್ರಕರಣ (3) ಅಥವಾ ಉಪಪ್ರಕರಣ (4)ರ" ಎಂಬ ಪದಗಳು, ಅಂಕಿಗಳ ಮತ್ತು ಆವರಣ ಚಿಹ್ನೆಗಳ ಬದಲಿಗೆ "ಈ ಅಧಿನಿಯಮ ಅಥವಾ ಸಂಯೋಜಿತ ಸರಕು ಮತ್ತು ಸೇವೆಗಳ ಅಧಿನಿಯಮ, 2017(2017ರ ಕರ್ನಾಟಕ ಅಧಿನಿಯಮ 27)ರ ಪ್ರಕರಣ 5ರ ಉಪಪ್ರಕರಣ (3) ಅಥವಾ ಉಪಪ್ರಕರಣ (4)ರ" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳನ್ನು 2025ರ ಏಪ್ರಿಲ್ 1ನೇ ದಿನಾಂಕದಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಿರುವುದಾಗಿ ಭಾವಿಸತಕ್ಕದ್ದು.

7. ಪ್ರಕರಣ 34ರ ತಿದ್ದುಪಡಿ.- ಮೂಲ ಅಧಿನಿಯಮದ ಪ್ರಕರಣ 34ರ (2)ನೇ ಉಪ-ಪ್ರಕರಣದ ಪರಂತುಕಕ್ಕೆ ಈ ಮುಂದಿನ ಪರಂತುಕವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಪರಂತು ಈ ಮುಂದಿನವುಗಳಲ್ಲಿ ಪೂರೈಕೆದಾರನ ಹುಟ್ಟುವಳಿ ತೆರಿಗೆ ಬಾಧ್ಯತೆಯಲ್ಲಿನ ಇಳಿಕೆಯನ್ನು ಅನುಮತಿಸತಕ್ಕದ್ದಲ್ಲ,-

(i) ಅಂಥ ಜಮಾ ಚೀಟಿಗೆ ಸಂಬಂಧಿಸಿದಂತೆ ಹೂಡುವಳಿ ತೆರಿಗೆ ಜಮೆಯನ್ನು ಪಡೆದುಕೊಂಡಿದ್ದಲ್ಲಿ, ಅಂಥ ಸ್ವೀಕೃತಿದಾರನು ನೋಂದಾಯಿತ ವ್ಯಕ್ತಿಯಾಗಿದ್ದು, ಅದನ್ನು ಸ್ವೀಕೃತಿದಾರನು ಹಿಮ್ಮುಖಗೊಳಿಸದಿದ್ದರೆ;

(ii) ಇತರ ಪ್ರಕರಣಗಳಲ್ಲಿ, ಅಂಥ ಪೂರೈಕೆಯ ತೆರಿಗೆ ಮೇಲಿನ ಹೊರೆಯನ್ನು ಯಾರೇ ಇತರ ವ್ಯಕ್ತಿಯ ಮೇಲೆ ಹೊರಿಸಿದ್ದರೆ.".

8. ಪ್ರಕರಣ 38ರ ತಿದ್ದುಪಡಿ.- ಮೂಲ ಅಧಿನಿಯಮದ ಪ್ರಕರಣ 34ರಲ್ಲಿ,-

(i) ಉಪ-ಪ್ರಕರಣ (1)ರಲ್ಲಿ "ಸ್ವಯಂ-ಜನ್ಯಗೊಂಡ ವಿವರ ಪತ್ರದ" ಎಂಬ ಪದಗಳ ಬದಲಿಗೆ "ವಿವರ ಪತ್ರದ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) ಉಪ-ಪ್ರಕರಣ (2)ರಲ್ಲಿ,-

(ಎ) "ಅಡಿಯಲ್ಲಿ ಸ್ವಯಂ-ಜನ್ಯಗೊಂಡ" ಎಂಬ ಪದಗಳ ಬದಲಿಗೆ "ಉಲ್ಲೇಖದಲ್ಲಿನ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು;

(ಬಿ) ಖಂಡ (ಎ)ರಲ್ಲಿ "ಮತ್ತು" ಎಂಬ ಪದವನ್ನು ತೆಗೆದುಹಾಕತಕ್ಕದ್ದು;

(ಸಿ) ಖಂಡ (ಬಿ)ರಲ್ಲಿ "ಈ ಕೆಳಕಂಡವರಿಂದ" ಎಂಬ ಪದಗಳ ಬದಲಿಗೆ "ಈ ಕೆಳಕಂಡವರನ್ನು ಒಳಗೊಂಡಂತೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಡಿ) ಖಂಡ (ಬಿ) ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಸಿ) ನಿಯಮಿಸಬಹುದಾದಂಥ ಇತರ ವಿವರಗಳು.".

9. ಪ್ರಕರಣ 39ರ ತಿದ್ದುಪಡಿ.- ಮೂಲ ಅಧಿನಿಯಮದ ಪ್ರಕರಣ 39ರಲ್ಲಿನ ಉಪ-ಪ್ರಕರಣ (1)ರಲ್ಲಿ "ಅಂಥ ಸಮಯದೊಳಗಾಗಿ" ಎಂಬ ಪದಗಳ ಬದಲಿಗೆ "ಅಂಥ ಸಮಯದೊಳಗಾಗಿ ಹಾಗೂ ಅಂಥ ಷರತ್ತುಗಳು ಮತ್ತು ನಿರ್ಬಂಧಗಳಿಗೊಳಪಟ್ಟು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

10. ಪ್ರಕರಣ 107ರ ತಿದ್ದುಪಡಿ.- ಮೂಲ ಅಧಿನಿಯಮದ ಪ್ರಕರಣ 107ರ (6)ನೇ ಉಪ-ಪ್ರಕರಣದ ಪರಂತುಕಕ್ಕೆ ಈ ಮುಂದಿನ ಪರಂತುಕವನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಪರಂತು ಯಾವುದೇ ತೆರಿಗೆಯ ತಗಾದೆಯನ್ನು ಒಳಗೊಂಡಿಲ್ಲದ ದಂಡನೆಯನ್ನು ಬೇಡುವ ಯಾವುದೇ ಆದೇಶದ ಸಂಬಂಧದಲ್ಲಿ, ಅಂಥ ಆದೇಶದ ವಿರುದ್ಧ ಅಪೀಲುದಾರನು, ಸದರಿ ದಂಡದ ಶೇಕಡ ಹತ್ತರಷ್ಟಕ್ಕೆ ಸಮನಾದ ಮೊತ್ತವನ್ನು ಸಂದಾಯ ಮಾಡಿದ ಹೊರತು ಯಾವುದೇ ಅಪೀಲನ್ನು ಸಲ್ಲಿಸತಕ್ಕದ್ದಲ್ಲ."

11. ಪ್ರಕರಣ 112ರ ತಿದ್ದುಪಡಿ.- ಮೂಲ ಅಧಿನಿಯಮದ ಪ್ರಕರಣ 112ರ (8)ನೇ ಉಪ-ಪ್ರಕರಣಕ್ಕೆ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು ಯಾವುದೇ ತೆರಿಗೆಯ ತಗಾದೆಯನ್ನು ಒಳಗೊಂಡಿಲ್ಲದ ದಂಡನೆಯನ್ನು ಬೇಡುವ ಯಾವುದೇ ಆದೇಶದ ಸಂಬಂಧದಲ್ಲಿ, ಅಂಥ ಆದೇಶದ ವಿರುದ್ಧ ಅಪೀಲುದಾರನು, ಪ್ರಕರಣ 107ರ ಉಪ-ಪ್ರಕರಣ (6)ರ ಪರಂತುಕದ ಅಡಿಯಲ್ಲಿ ಪಾವತಿಸಬೇಕಾದ ಮೊತ್ತದ ಜೊತೆಗೆ ಸದರಿ ದಂಡದ ಶೇಕಡ ಹತ್ತರಷ್ಟಕ್ಕೆ ಸಮನಾದ ಮೊತ್ತವನ್ನು ಸಂದಾಯ ಮಾಡಿದ ಹೊರತು ಯಾವುದೇ ಅಪೀಲನ್ನು ಸಲ್ಲಿಸತಕ್ಕದ್ದಲ್ಲ."

12. ಹೊಸ ಪ್ರಕರಣ 122ಬಿ ಸೇರ್ಪಡೆ.- ಮೂಲ ಅಧಿನಿಯಮದ ಪ್ರಕರಣ 122ಎ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**122ಬಿ. ಮಾರ್ಗಪತ್ತೆ ಮತ್ತು ಗುರುತುಹಚ್ಚುವ ಕಾರ್ಯವ್ಯವಸ್ಥೆಯನ್ನು ಪಾಲಿಸಲು ವಿಫಲವಾದುದಕ್ಕಾಗಿ ದಂಡನೆ.-** ಈ ಅಧಿನಿಯಮದಲ್ಲಿ ಏನೇ ಒಳಗೊಂಡಿದ್ದರೂ, 148ಎ ಪ್ರಕರಣದ ಉಪ-ಪ್ರಕರಣ (1)ರ ಖಂಡ (ಬಿ)ರಲ್ಲಿ ಉಲ್ಲೇಖಿಸಲಾದ ಯಾರೇ ವ್ಯಕ್ತಿಯು, ಸದರಿ ಪ್ರಕರಣದ ಉಪಬಂಧಗಳ ಉಲ್ಲಂಘನೆಯನ್ನು ಮಾಡಿದರೆ, ಆತನು ಅಧ್ಯಾಯ XVರ ಅಥವಾ ಈ ಅಧ್ಯಾಯದ ಉಪಬಂಧಗಳ ಅಡಿಯಲ್ಲಿನ ಯಾವುದೇ ದಂಡನೆಯ ಜೊತೆಗೆ ಒಂದು ಲಕ್ಷ ರೂಪಾಯಿಗಳ ಮೊತ್ತ ಅಥವಾ ಅಂಥ ಸರಕುಗಳ ಮೇಲೆ ಪಾವತಿಸಬೇಕಾದ ತೆರಿಗೆಯ ಶೇಕಡ ಹತ್ತರಷ್ಟರಲ್ಲಿ ಯಾವುದು ಹೆಚ್ಚೋ ಅಷ್ಟಕ್ಕೆ ಸಮನಾದ ಮೊತ್ತದ ದಂಡವನ್ನು ಪಾವತಿಸಲು ಹೊಣೆಗಾರನಾಗಿರತಕ್ಕದ್ದು.".

13. ಹೊಸ ಪ್ರಕರಣ 148ಎ ಸೇರ್ಪಡೆ.- ಮೂಲ ಅಧಿನಿಯಮದ ಪ್ರಕರಣ 122ಎ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"**148ಎ. ಕೆಲವು ಸರಕುಗಳ ಮಾರ್ಗಪತ್ತೆ ಮತ್ತು ಗುರುತುಹಚ್ಚುವ ಕಾರ್ಯವ್ಯವಸ್ಥೆ.-** ಸರ್ಕಾರವು ಕೌನ್ಸಿಲ್‌ನ ಶಿಫಾರಸ್ಸುಗಳ ಮೇರೆಗೆ, ಅಧಿಸೂಚನೆಯ ಮೂಲಕ,-

(ಎ) ಸರಕುಗಳನ್ನು;

(ಬಿ) ಈ ಪ್ರಕರಣದ ಉಪಬಂಧಗಳು ಅನ್ವಯವಾಗತಕ್ಕ ಅಂಥ ಸರಕುಗಳ ಅನುಭೋಗ ಅಥವಾ ವ್ಯವಹಾರದಲ್ಲಿರುವ ವ್ಯಕ್ತಿಗಳು ಅಥವಾ ವ್ಯಕ್ತಿಗಳ ವರ್ಗವನ್ನು,

\- ನಿರ್ದಿಷ್ಟಪಡಿಸಬಹುದು.

(2) ಉಪ-ಪ್ರಕರಣ (1)ರ (ಎ) ಖಂಡದಲ್ಲಿ ಉಲ್ಲೇಖವಾಗಿರುವ ಸರಕುಗಳ ಸಂಬಂಧದಲ್ಲಿ ಸರ್ಕಾರವು,-

(ಎ) ವಿಶಿಷ್ಟ ಗುರುತು ಛಾಪನೆಯನ್ನು ಅಂಟಿಸಲು ಅನುವಾಗುವ ಹಾಗೂ ವಿದ್ಯುನ್ಮಾನ ಸಂಗ್ರಹ ಮತ್ತು ನಿಯಮಿಸಬಹುದಾದಂಥ ವ್ಯಕ್ತಿಗಳ ಮೂಲಕ ಅದರಲ್ಲಿರುವ ಮಾಹಿತಿ ಪಡೆಯುವುದಕ್ಕಾಗಿ ವ್ಯವಸ್ಥೆಯೊಂದನ್ನು ಉಪಬಂಧಿಸಬಹುದು; ಮತ್ತು

(ಬಿ) ಅಂಥ ಸರಕುಗಳಿಗೆ ಅದರಲ್ಲಿ ದಾಖಲಿಸಬೇಕಾದ ಮಾಹಿತಿಯನ್ನು ಒಳಗೊಂಡಂತೆ ವಿಶಿಷ್ಟ ಗುರುತು ಛಾಪನೆಯನ್ನು ನಿಯಮಿಸಬಹುದು.

(3) ಉಪ-ಪ್ರಕರಣ (1)ರಲ್ಲಿ ಉಲ್ಲೇಖಿಸಲಾದ ವ್ಯಕ್ತಿಗಳು,-

(ಎ) ಸದರಿ ಸರಕುಗಳು ಅಥವಾ ಅದರೊಂದಿಗಿನ ಪ್ಯಾಕೇಜುಗಳ ಮೇಲೆ ಅಂಥ ಮಾಹಿತಿಯನ್ನೊಳಗೊಂಡ ಮತ್ತು ಅಂಥ ವಿಧಾನದಲ್ಲಿ ವಿಶಿಷ್ಟ ಗುರುತು ಛಾಪನೆಯನ್ನು ಅಂಟಿಸತಕ್ಕದ್ದು;

(ಬಿ) ಅಂಥ ಸಮಯದೊಳಗಾಗಿ ಅಂಥ ಮಾಹಿತಿ ಮತ್ತು ವಿವರಗಳನ್ನು ಒದಗಿಸತಕ್ಕದ್ದು ಹಾಗೂ ಅಂಥ ದಾಖಲೆಗಳು ಅಥವಾ ದಸ್ತಾವೇಜುಗಳನ್ನು ಅಂಥ ನಮೂನೆ ಮತ್ತು ವಿಧಾನದಲ್ಲಿ ನಿರ್ವಹಿಸತಕ್ಕದ್ದು;

(ಸಿ) ಗುರುತಿಸುವಿಕೆ, ಸಾಮರ್ಥ್ಯ, ಕಾರ್ಯಾಚರಣೆಯ ಅವಧಿ ಮತ್ತು ಅಂಥ ಇತರ ವಿವರಗಳು ಅಥವಾ ಮಾಹಿತಿಯನ್ನು ಒಳಗೊಂಡಂತೆ ಅಂಥ ಸರಕುಗಳ ಉತ್ಪಾದನೆಯ ವ್ಯವಹಾರದ ಸ್ಥಳದಲ್ಲಿ ಸ್ಥಾಪಿಸಲಾದ ಯಂತ್ರೋಪಕರಣದ ವಿವರಗಳನ್ನು ಅಂಥ ಸಮಯದೊಳಗೆ ಹಾಗೂ ಅಂಥ ನಮೂನೆ ಮತ್ತು ವಿಧಾನದಲ್ಲಿ ಒದಗಿಸತಕ್ಕದ್ದು; ಮತ್ತು

(ಡಿ) ಉಪ-ಪ್ರಕರಣ (2)ರಲ್ಲಿ ಉಲ್ಲೇಖಿಸಲಾದ ವ್ಯವಸ್ಥೆಗೆ ಸಂಬಂಧಿಸಿದ ಅಂಥ ಮೊತ್ತವನ್ನು ನಿಯಮಿಸಬಹುದಾದಂತೆ ಪಾವತಿಸತಕ್ಕದ್ದು.".

14. ಅನುಸೂಚಿ IIIರ ತಿದ್ದುಪಡಿ.- ಮೂಲ ಅಧಿನಿಯಮದ ಅನುಸೂಚಿ IIIರಲ್ಲಿ,-

(i) 8ನೇ ಖಂಡಿಕೆಯಲ್ಲಿನ (ಎ) ಖಂಡದ ತರುವಾಯ ಈ ಮುಂದಿನ ಖಂಡವನ್ನು ಸೇರಿಸತಕ್ಕದ್ದು ಮತ್ತು 2017ರ ಜುಲೈ 1ನೇ ದಿನಾಂಕದಿಂದ ಜಾರಿಗೆ ಬರುವಂತೆ ಸೇರಿಸಿರುವುದಾಗಿ ಭಾವಿಸತಕ್ಕದ್ದು, ಎಂದರೆ:-

"(ಎಎ) ವಿಶೇಷ ವಿತ್ತ ವಲಯದಲ್ಲಿ ಅಥವಾ ಮುಕ್ತ ಮಾರಾಟ ಶೇಖರಣಾ ವಲಯದಲ್ಲಿ ರಫ್ತಿಗಾಗಿ ಅಥವಾ ಸ್ಥಳೀಯ ಸುಂಕಸೂಚಿ ಪ್ರದೇಶಕ್ಕೆ ತೀರುವಳಿ ಮಾಡುವ ಮೊದಲು ಶೇಖರಿಸಿದ ಸರಕುಗಳ ಪೂರೈಕೆ;"

(ii) ವಿವರಣೆ 2ರಲ್ಲಿ "ಖಂಡಿಕೆ 8ರ" ಎಂಬ ಪದಗಳು ಮತ್ತು ಅಂಕಿಯ ತರುವಾಯ "(ಎ) ಖಂಡದ" ಪದ, ಆವರಣ ಚಿಹ್ನೆಗಳು ಮತ್ತು ಅಕ್ಷರವನ್ನು ಸೇರಿಸತಕ್ಕದ್ದು ಮತ್ತು 2017ರ ಜುಲೈ 1ನೇ ದಿನಾಂಕದಿಂದ ಜಾರಿಗೆ ಬರುವಂತೆ ಸೇರಿಸಿರುವುದಾಗಿ ಭಾವಿಸತಕ್ಕದ್ದು; ಮತ್ತು

(iii) ವಿವರಣೆ 2ರ ತರುವಾಯ ಈ ಮುಂದಿನ ವಿವರಣೆಯನ್ನು ಸೇರಿಸತಕ್ಕದ್ದು ಮತ್ತು 2017ರ ಜುಲೈ 1ನೇ ದಿನಾಂಕದಿಂದ ಜಾರಿಗೆ ಬರುವಂತೆ ಸೇರಿಸಿರುವುದಾಗಿ ಭಾವಿಸತಕ್ಕದ್ದು, ಎಂದರೆ:-

"ವಿವರಣೆ 3.- 8ನೇ ಖಂಡಿಕೆಯ (ಎಎ) ಖಂಡದ ಉದ್ದೇಶಗಳಿಗಾಗಿ, "ವಿಶೇಷ ವಿತ್ತ ವಲಯ", "ಮುಕ್ತ ಮಾರಾಟ ಶೇಖರಣಾ ವಲಯ" ಮತ್ತು "ಸ್ಥಳೀಯ ಸುಂಕಸೂಚಿ ಪ್ರದೇಶ" ಎಂಬ ಪದಾವಳಿಗಳು ವಿಶೇಷ ವಿತ್ತ ವಲಯಗಳ ಅಧಿನಿಯಮ, 2005(2005ರ ಕೇಂದ್ರ ಅಧಿನಿಯಮ 28)ರ 2ನೇ ಪ್ರಕರಣದಲ್ಲಿ ಅವುಗಳಿಗೆ ನೀಡಲಾದ ಅದೇ ಅರ್ಥವನ್ನು ಹೊಂದಿರತಕ್ಕದ್ದು."

15. ಸಂಗ್ರಹಿಸಲಾದ ತೆರಿಗೆಗೆ ಮರುಸಂದಾಯ ಇರುವುದಿಲ್ಲ.- ಸಂಗ್ರಹಿಸಲಾದ, ಆದರೆ ಈ ತಿದ್ದುಪಡಿ ಅಧಿನಿಯಮದ 14ನೇ ಪ್ರಕರಣವು ಜಾರಿಯಲ್ಲಿರುವ ಎಲ್ಲಾ ವಾಸ್ತವಿಕ ಸಮಯಗಳಲ್ಲೂ ಮಾಡಿರುವ ಎಲ್ಲಾ ತೆರಿಗೆಗಳನ್ನು ಮರುಸಂದಾಯ ಮಾಡತಕ್ಕದ್ದಲ್ಲ.

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
(ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

ಕರ್ನಾಟಕ ಸರ್ಕಾರದಿಂದ ರಾಜ್ಯದೊಳಗಿನ ಸರಕುಗಳ ಅಥವಾ ಸೇವೆಗಳ ಅಥವಾ ಅವುಗಳೆರಡರ ಪೂರೈಕೆಯ ಮೇಲೆ ತೆರಿಗೆಯನ್ನು ವಿಧಿಸಲು ಹಾಗೂ ಸಂಗ್ರಹಿಸುವ ಉದ್ದೇಶದಿಂದ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ,2017ನ್ನು ಅಧಿನಿಯಮಿತಗೊಳಿಸಲಾಗಿದೆ.

ಆದಾಗ್ಯೂ, ಹೊಸ ತೆರಿಗೆ ವ್ಯವಸ್ಥೆಯು ಕೆಲವೊಂದು ತೊಂದರೆಗಳನ್ನು ಎದುರಿಸಿದೆ. ಈ ತೊಂದರೆಗಳನ್ನು ನಿವಾರಿಸಲು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017 (2017ರ ಕರ್ನಾಟಕ ಅಧಿನಿಯಮ 27)ನ್ನು ತಿದ್ದುಪಡಿ ಮಾಡಲು ಪ್ರಸ್ತಾಪಿಸಲಾಗಿದೆ.

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ (ತಿದ್ದುಪಡಿ) ವಿಧೇಯಕ, 2025, ಇತರೆ ವಿಷಯಗಳ ಜೊತೆಗೆ, ಈ ಕೆಳಕಂಡವುಗಳಿಗೆ ಉಪಬಂಧ ಕಲ್ಪಿಸುತ್ತದೆ, ಅಂದರೆ:–

(1) (ಎ)ಪರಿಭಾಷೆಗಳಿಗೆ ಸಂಬಂಧಿಸಿದಂತೆ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 2ರ ತಿದ್ದುಪಡಿಯನ್ನು ವಿಧೇಯಕದ ಖಂಡ 2 ಕೋರುತ್ತದೆ. ಪ್ರಕರಣ 2 ರ ಖಂಡ (61) ರಲ್ಲಿನ "ಹೂಡುವಳಿ ಸೇವೆ ಹಂಚಿಕೆದಾರ" ಪರಿಭಾಷೆಯನ್ನು ತಿದ್ದುಪಡಿ ಮಾಡಲು, ಆ ಮೂಲಕ ಅಂತರ್-ರಾಜ್ಯ ಪೂರೈಕೆಗಳ ಮೇಲೆ ಹಿಮ್ಮುಖ ವಿಧಿಸುವಿಕೆಯ ಆಧಾರದಲ್ಲಿ ಸಂದಾಯ ಮಾಡಬೇಕಾದ ತೆರಿಗೆಗೆ ಸಂಬಂಧಿಸಿದಂತೆ ಹೂಡುವಳಿ ತೆರಿಗೆ ಸೇವೆ ಹಂಚಿಕೆದಾರನಿಂದ ಹೂಡುವಳಿ ತೆರಿಗೆಯ ಹಂಚಿಕೆಗಾಗಿ, ಹೂಡುವಳಿ ಸೇವೆ ಹಂಚಿಕೆದಾರನ ಪರಿಭಾಷೆಯಲ್ಲಿ ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 5ರ ಉಪ-ಪ್ರಕರಣ (3) ಮತ್ತು ಉಪ-ಪ್ರಕರಣ (4)ಕ್ಕೆ ಉಲ್ಲೇಖವನ್ನು ಸೇರಿಸುವ ಮೂಲಕ, ಸುವ್ಯಕ್ತವಾಗಿ ಉಪಬಂಧ ಕಲ್ಪಿಸಲು ಪ್ರಸ್ತಾಪಿಸಲಾಗಿದೆ

(ಬಿ) ಈ ತಿದ್ದುಪಡಿ 2025ರ ಏಪ್ರಿಲ್ 1ನೇ ದಿನದಿಂದ ಜಾರಿಗೆ ಬರತಕ್ಕದ್ದು.

(ಸಿ) ಪ್ರಕರಣ 2ರ ಖಂಡ 69ರ ಉಪಖಂಡ (ಸಿ)ಯನ್ನು, ಪೌರಾಡಳಿತ ಅಥವಾ ಸ್ಥಳೀಯ ನಿಧಿ ಪದವನ್ನು ಪೌರಾಡಳಿತ ನಿಧಿ ಅಥವಾ ಸ್ಥಳೀಯ ನಿಧಿ ಪದಗಳೊಂದಿಗೆ ಪ್ರತಿಯೋಜಿಸುವುದಕ್ಕಾಗಿ ಮತ್ತು ಸದರಿ ಉಪಖಂಡದ ನಂತರ ವಿವರಣೆಯನ್ನು ಸೇರಿಸುವುದಕ್ಕಾಗಿ, ಸದರಿ ಉಪಬಂಧದ ಅಡಿಯಲ್ಲಿ ಸ್ಥಳೀಯ ಪ್ರಾಧಿಕಾರದ ಪರಿಭಾಷೆಯಲ್ಲಿ ಉಪಯೋಗಿಸಿದ ಸ್ಥಳೀಯ ನಿಧಿ ಮತ್ತು ಪೌರಾಡಳಿತ ನಿಧಿ ಪದಗಳ ಪರಿಭಾಷೆಗಳನ್ನು ಉಪಬಂಧಿಸುವುದಕ್ಕಾಗಿ ಆ ಮುಖಾಂತರ ಸದರಿ ಪದಗಳ ವ್ಯಾಪ್ತಿಯನ್ನು ಸ್ಪಷ್ಟೀಕರಿಸುವುದಕ್ಕಾಗಿ ತಿದ್ದುಪಡಿ ಮಾಡಲು ಮತ್ತೂ ಪ್ರಸ್ತಾಪಿಸಿದೆ.

(ಡಿ) ಜಾಡು ಮತ್ತು ಪತ್ತೆ ಹಚ್ಚುವ ಕಾರ್ಯವಿಧಾನದ ಅನುಷ್ಠಾನಕ್ಕಾಗಿ, ವಿಶಿಷ್ಟ, ಸುರಕ್ಷಿತ ಮತ್ತು ತೆಗೆದುಹಾಕಲಾಗದ ಒಂದು ಗುರುತು ಎಂದು ಅರ್ಥೈಸಲು ವಿಶಿಷ್ಟ ಗುರುತಿನ ಗುರುತು ಹಾಕುವಿಕೆ ಪದಾವಳಿಯನ್ನು ಪರಿಭಾಷಿಸುವುದಕ್ಕಾಗಿ ಪ್ರಕರಣ 2ರಲ್ಲಿ ಹೊಸ ಖಂಡ (116ಎ)ಯನ್ನು ಸೇರಿಸಲು ಸಹ ಪ್ರಸ್ತಾಪಿಸಲಾಗಿದೆ

(2) ಸರಕುಗಳ ಪೂರೈಕೆಯು ಅಲ್ಲ ಸೇವೆಗಳ ಪೂರೈಕೆಯು ಅಲ್ಲದಿರುವ ಕಾರಣ ವೋಚರ್‌ಗಳಲ್ಲಿನ ವ್ಯಹಾರಕ್ಕೆ ಸಂಬಂಧಿಸಿದಂತೆ ಪೂರೈಕೆಯ ಸಮಯದ ಉಪಬಂಧವನ್ನು ತೆಗೆದುಹಾಕುವುದಕ್ಕಾಗಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 12ರ ಉಪ-ಪ್ರಕರಣ (4)ನ್ನು ಬಿಟ್ಟುಬಿಡಲು ವಿಧೇಯಕದ ಖಂಡ (3) ಕೋರುತ್ತದೆ.

(3) ಸರಕುಗಳ ಪೂರೈಕೆಯು ಅಲ್ಲ ಸೇವೆಗಳ ಪೂರೈಕೆಯು ಅಲ್ಲದಿರುವ ಕಾರಣ ವೋಚರ್‌ಗಳಲ್ಲಿನ ವ್ಯಹಾರಕ್ಕೆ ಸಂಬಂಧಿಸಿದಂತೆ ಪೂರೈಕೆಯ ಸಮಯದ ಉಪಬಂಧವನ್ನು ತೆಗೆದುಹಾಕುವುದಕ್ಕಾಗಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 13ರ ಉಪ-ಪ್ರಕರಣ (4)ನ್ನು ಬಿಟ್ಟುಬಿಡಲು ವಿಧೇಯಕದ ಖಂಡ (4) ಕೋರುತ್ತದೆ.

(4) (ಎ) ಅಂಥ ಪ್ರಕರಣಗಳಲ್ಲಿ ಹೂಡುವಳಿ ತೆರಿಗೆ ಜಮೆಯ ಉಪಯೋಗಿಸುವಿಕೆಯ ಉದ್ದೇಶಕ್ಕಾಗಿ ಅರ್ಥೈಸುವಿಕೆಯಲ್ಲಿನ ಯಾವುದೇ ದ್ವಂದ್ವತೆಯನ್ನು ತೆಗೆದುಹಾಕುವುದಕ್ಕಾಗಿ ಸ್ಥಾವರ ಅಥವಾ ಯಂತ್ರೋಪಕರಣ ಪದಾವಳಿಯನ್ನು ಸ್ಥಾವರ ಮತ್ತು ಯಂತ್ರೋಪಕರಣ ಪದಾವಳಿಯಿಂದ ಪ್ರತಿಯೋಜಿಸುವುದಕ್ಕಾಗಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 17ರ ಉಪ-ಪ್ರಕರಣ (5)ರ ಖಂಡ (ಡಿ) ಯನ್ನು ತಿದ್ದುಪಡಿ ಮಾಡಲು ವಿಧೇಯಕದ ಖಂಡ (5) ಕೋರುತ್ತದೆ.

(ಬಿ) ಯಾವುದೇ ನ್ಯಾಯಾಲಯ, ನ್ಯಾಯಾಧೀಕರಣ ಅಥವಾ ಇತರೆ ಪ್ರಾಧಿಕಾರದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದಲ್ಲಿ ಒಳಗೊಂಡಿರುವುದಕ್ಕೆ ತದ್ವಿರುದ್ಧವಾಗಿ ಏನೇ ಇದ್ದರೂ ಸಹ ಸದರಿ ತಿದ್ದುಪಡಿಯನ್ನು ಮಾಡಲಾಗಿದೆ ಎಂದು ಸ್ಪಷ್ಟೀಕರಿಸುವುದಕ್ಕಾಗಿ ಒಂದು ವಿವರಣೆಯನ್ನ ಸೇರಿಸುವುದನ್ನು ಇದು ಮತ್ತೂ ಕೋರುತ್ತದೆ.

(ಸಿ) ಈ ತಿದ್ದುಪಡಿ 2017 ಜುಲೈ 1ನೇ ದಿನದಿಂದ ಪೂರ್ವಾನ್ವಯವಾಗಿ ಜಾರಿಗೆ ಬರತಕ್ಕದ್ದು.

(5) (ಎ) ಅಂತರ್-ರಾಜ್ಯ ಪೂರೈಕೆಗಳ ಮೇಲೆ ಹಿಮ್ಮುಖ ವಿಧಿಸುವಿಕೆಯ ಆಧಾರದಲ್ಲಿ ಸಂದಾಯ ಮಾಡಬೇಕಾದ ತೆರಿಗೆಗೆ ಸಂಬಂಧಿಸಿದಂತೆ ಹೂಡುವಳಿ ತೆರಿಗೆ ಸೇವೆ ಹಂಚಿಕೆದಾರನಿಂದ ಹೂಡುವಳಿ ತೆರಿಗೆಯ ಹಂಚಿಕೆಗಾಗಿ, ಹೂಡುವಳಿ ಸೇವೆ ಹಂಚಿಕೆದಾರನ ಪರಿಭಾಷೆಯಲ್ಲಿ ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 5ರ ಉಪ-ಪ್ರಕರಣ (3) ಮತ್ತು ಉಪ-ಪ್ರಕರಣ (4)ಕ್ಕೆ ಉಲ್ಲೇಖವನ್ನು ಸೇರಿಸುವ ಮೂಲಕ, ಸುವ್ಯಕ್ತವಾಗಿ ಉಪಬಂಧ ಕಲ್ಪಿಸಲು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 20ರ ಉಪ-ಪ್ರಕರಣ (1)ನ್ನು ತಿದ್ದುಪಡಿ ಮಾಡಲು ವಿಧೇಯಕದ ಖಂಡ (6) ಕೋರುತ್ತದೆ.

(ಬಿ) ಅಂತರ್-ರಾಜ್ಯ ಪೂರೈಕೆಗಳ ಮೇಲೆ ಹಿಮ್ಮುಖ ವಿಧಿಸುವಿಕೆಯ ಆಧಾರದಲ್ಲಿ ಸಂದಾಯ ಮಾಡಬೇಕಾದ ತೆರಿಗೆಗೆ ಸಂಬಂಧಿಸಿದಂತೆ ಹೂಡುವಳಿ ತೆರಿಗೆ ಸೇವೆ ಹಂಚಿಕೆದಾರನಿಂದ ಹೂಡುವಳಿ ತೆರಿಗೆಯ ಹಂಚಿಕೆಗಾಗಿ, ಹೂಡುವಳಿ ಸೇವೆ ಹಂಚಿಕೆದಾರನ ಪರಿಭಾಷೆಯಲ್ಲಿ ಏಕೀಕೃತ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 5ರ ಉಪ-ಪ್ರಕರಣ (3) ಮತ್ತು ಉಪ-ಪ್ರಕರಣ (4)ಕ್ಕೆ ಉಲ್ಲೇಖವನ್ನು ಸೇರಿಸುವ ಮೂಲಕ, ಸುವ್ಯಕ್ತವಾಗಿ ಉಪಬಂಧ ಕಲ್ಪಿಸಲು ಸದರಿ ಪ್ರಕರಣದ ಉಪ-ಪ್ರಕರಣ (2)ನ್ನು ತಿದ್ದುಪಡಿ ಮಾಡಲು ಇದು ಮತ್ತೂ ಕೋರುತ್ತದೆ.

(ಸಿ) ಈ ತಿದ್ದುಪಡಿ 2025ರ ಏಪ್ರಿಲ್ 1ನೇ ದಿನದಿಂದ ಜಾರಿಗೆ ಬರತಕ್ಕದ್ದು.

(6) (ಎ)ಒಂದು ಜಮೆ ಚೀಟಿಗೆ ಸಂಬಂಧಿಸಿದಂತೆ ಪೂರೈಕೆದಾರನ ತೆರಿಗೆ ಬಾಧ್ಯತೆಯ ಇಳಿಕೆಯ ಉದ್ದೇಶಕ್ಕಾಗಿ, ನೋಂದಾಯಿತ ಸ್ವೀಕೃತಿದಾರನಿಂದ ಉಪಯೋಗಿಸಿದ್ದಲ್ಲಿ, ಸದರಿ ಜಮೆ ಚೀಟಿಗೆ ಸಂಬಂಧಿಸಿದಂತೆ, ಸಂಬಂಧಪಟ್ಟ ಹೂಡುವಳಿ ತೆರಿಗೆ ಜಮೆಯನ್ನು ಹಿಮ್ಮುಖಗೊಳಿಸುವ ಅಗತ್ಯತೆಗಾಗಿ ಸುವ್ಯಕ್ತವಾಗಿ ಉಪಬಂಧಿಸಲು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 34ರ ಉಪ-ಪ್ರಕರಣ (2)ರ ತಿದ್ದುಪಡಿ ಮಾಡಲು ವಿಧೇಯಕದ ಖಂಡ (7) ಕೋರುತ್ತದೆ.

(ಬಿ) ಸದರಿ ಜಮೆ ಚೀಟಿಗೆ ಸಂಬಂಧಿಸಿದಂತೆ ಪೂರೈಕೆದಾರನ ತೆರಿಗೆ ಬಾಧ್ಯತೆಯ ಇಳಿಕೆಯ ಉದ್ದೇಶಕ್ಕಾಗಿ, ಪೂರೈಕೆಯ ಮೇಲಿನ ತೆರಿಗೆ ಭಾರವನ್ನು ವರ್ಗಾಯಿಸಿಲ್ಲ ಎಂಬ ಸದರಿ ಪರಂತುಕದಲ್ಲಿನ ಷರತ್ತನ್ನು ತೆಗೆದು ಹಾಕಲು ಮತ್ತೂ ಕೋರಲಾಗಿದೆ.

(7) (ಎ) ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 38ರ ಉಪ-ಪ್ರಕರಣ (1) ರ ಹೂಡುವಳಿ ತೆರಿಗೆ ಜಮೆಯ ವಿವರಪತ್ರಕ್ಕೆ ಸಂಬಂಧಿಸಿದಂತೆ "ಸ್ವಯಂ– ಜನ್ಯಗೊಂಡ" ಎಂಬ ಪದಾವಳಿಯನ್ನು ಬಿಟ್ಟುಬಿಡುವುದಕ್ಕೆ ವಿಧೇಯಕದ ಖಂಡ (8) ಕೋರುತ್ತದೆ.

(ಬಿ) ಸದರಿ ಪ್ರಕರಣ 38ರ ಉಪ-ಪ್ರಕರಣ (2)ನ್ನು ಹೂಡುವಳಿ ತೆರಿಗೆ ಜಮೆಯ ವಿವರಪತ್ರಕ್ಕೆ ಸಂಬಂಧಿಸಿದಂತೆ "ಸ್ವಯಂ– ಜನ್ಯಗೊಂಡ" ಎಂಬ ಪದಾವಳಿಯನ್ನು ಬಿಟ್ಟುಬಿಡುವುದಕ್ಕೆ ಹಾಗೂ ಸದರಿ ಉಪ-ಪ್ರಕರಣದ ಖಂಡ(ಬಿ) ಯಲ್ಲಿ "ಕಾರಣದಿಂದಾಗಿ" ಎಂಬ ಪದದ ನಂತರ "ಒಳಗೊಂಡಂತೆ" ಎಂಬ ಪದಾವಳಿಯನ್ನು ಸೇರಿಸುವುದರ ಮೂಲಕ ಸದರಿ ಉಪ-ಪ್ರಕರಣವನ್ನು ಅಧಿನಿಯಮದ ಯಾವುದೇ ಇತರ ಉಪಬಂಧಗಳ ಅಡಿಯಲ್ಲಿ ತೆರಿಗೆ ಸಂದಾಯದಾರನಿಗೆ ಹೂಡುವಳಿ ತೆರಿಗೆ ಜಮೆ ಲಭ್ಯವಿಲ್ಲದಿರುವ ಇತರೆ ಪ್ರಕರಣಗಳನ್ನು ವ್ಯಾಪ್ತಿಗೊಳಪಡಿಸುವಂತೆ ಮಾಡಲು ತಿದ್ದುಪಡಿಯನ್ನು ಮತ್ತೂ ಕೋರುತ್ತದೆ.

(ಸಿ) ಹೂಡುವಳಿ ತೆರಿಗೆ ಜಮೆಯ ವಿವರಪತ್ರದಲ್ಲಿ ಲಭ್ಯಗೊಳಿಸಬೇಕಾದ ಇತರೆ ವಿವರಗಳನ್ನು ನಿಯಮಿಸಲು ಒಂದು ಸಮರ್ಥಗೊಳಿಸುವ ಖಂಡವನ್ನು ಉಪಬಂಧಿಸುವುದಕ್ಕಾಗಿ ಸದರಿ ಉಪ-ಪ್ರಕರಣದಲ್ಲಿ ಒಂದು ಹೊಸ ಖಂಡ (ಸಿ) ಯನ್ನು ಮತ್ತೂ ಸೇರಿಸುತ್ತದೆ.

(8) ಸದರಿ ಪ್ರಕರಣದ ಉಪ-ಪ್ರಕರಣದ ಅಡಿಯಲ್ಲಿ ರಿಟರ್ನಿನ ಸಲ್ಲಿಕೆಗಾಗಿ ಷರತ್ತುಗಳು ಮತ್ತು ನಿರ್ಬಂಧಗಳನ್ನು ನಿಯಮಿಸುವುದಕ್ಕಾಗಿ ಒಂದು ಸಮರ್ಥಗೊಳಿಸುವ ಖಂಡವನ್ನು ಉಪಬಂಧಿಸುವುದಕ್ಕಾಗಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 39ರ ಉಪ-ಪ್ರಕರಣ (1)ನ್ನು ತಿದ್ದುಪಡಿ ಮಾಡಲು ವಿಧೇಯಕದ ಖಂಡ (9) ಕೋರುತ್ತದೆ.

(9) ಯಾವುದೇ ತೆರಿಗೆಯ ತಗಾದೆಯನ್ನು ಒಳಗೊಳ್ಳದೆ ದಂಡದ ತಗಾದೆಯನ್ನು ಒಳಗೊಂಡಿರುವ ಒಂದು ಆದೇಶದ ವಿರುದ್ಧವಾಗಿ ಅಪೀಲು ಪ್ರಾಧಿಕಾರದ ಮುಂದೆ ಒಂದು ಅಪೀಲನ್ನು ಸಲ್ಲಿಸುವುದಕ್ಕಾಗಿ ದಂಡದ ಮೊತ್ತದ ಶೇ. 10 ರಷ್ಟು ಪೂರ್ವ ಠೇವಣಿಯ ಅಗತ್ಯತೆಯನ್ನು ಉಪಬಂಧಿಸಲು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 107ರ ಉಪ-ಪ್ರಕರಣ (6)ರ ಪರಂತುಕವನ್ನು ಪ್ರತ್ಯಾಯೋಜಿಸುವುದಕ್ಕಾಗಿ ವಿಧೇಯಕದ ಖಂಡ (10) ಕೋರುತ್ತದೆ.

(10) ಯಾವುದೇ ತೆರಿಗೆಯ ತಗಾದೆಯನ್ನು ಒಳಗೊಳ್ಳದೆ ದಂಡದ ತಗಾದೆಯನ್ನು ಒಳಗೊಂಡಿರುವ ಒಂದು ಆದೇಶದ ವಿರುದ್ಧವಾಗಿ ನ್ಯಾಯಾಧಿಕರಣದ ಮುಂದೆ ಒಂದು ಅಪೀಲನ್ನು ಸಲ್ಲಿಸುವುದಕ್ಕಾಗಿ ದಂಡದ ಮೊತ್ತದ ಶೇ. 10 ರಷ್ಟು ಪೂರ್ವ ಠೇವಣಿಯ ಅಗತ್ಯತೆಯನ್ನು ಉಪಬಂಧಿಸಲು ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದ ಪ್ರಕರಣ 112ರ ಉಪ-ಪ್ರಕರಣ (8)ರಲ್ಲಿ ಪರಂತುಕವನ್ನು ಸೇರಿಸುವುದಕ್ಕಾಗಿ ವಿಧೇಯಕದ ಖಂಡ (11) ಕೋರುತ್ತದೆ.

(11) ಜಾಡು ಮತ್ತು ಪತ್ತೆ ಹಚ್ಚುವ ಕಾರ್ಯವಿಧಾನಕ್ಕೆ ಸಂಬಂಧಿಸಿದ ಉಪಬಂಧಗಳ ಉಲ್ಲಂಘನೆಗಾಗಿ ದಂಡನೆಯ ಉಪಬಂಧಗಳನ್ನು ಒದಗಿಸುವುದಕ್ಕಾಗಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದಲ್ಲಿ ಒಂದು ಹೊಸ ಪ್ರಕರಣ 122ಬಿ ಯನ್ನು ಸೇರಿಸುವುದಕ್ಕಾಗಿ ವಿಧೇಯಕದ ಖಂಡ (12) ಕೋರುತ್ತದೆ.

(12) ನಿರ್ದಿಷ್ಟಪಡಿಸಿದ ಸರಕುಗಳ ಪೂರೈಕೆಯ ಪರಿಣಾಮಕಾರಿ ಮೇಲ್ವಿಚಾರಣೆ ಮತ್ತು ನಿಯಂತ್ರಣವನ್ನು ಖಾತ್ರಿಪಡಿಸುವುದಕ್ಕಾಗಿ ಜಾಡು ಮತ್ತು ಪತ್ತೆ ಹಚ್ಚುವ ಕಾರ್ಯವಿಧಾನವನ್ನು ಅನುಷ್ಠಾನಗೊಳಿಸುವುದಕ್ಕಾಗಿ ಒಂದು ಸಮರ್ಥಗೊಳಿಸುವ ಉಪಬಂಧವನ್ನು ಒದಗಿಸುವುದಕ್ಕಾಗಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮದಲ್ಲಿ ಒಂದು ಹೊಸ ಪ್ರಕರಣ 148ಎ ಯನ್ನು ಸೇರಿಸುವುದಕ್ಕಾಗಿ ವಿಧೇಯಕದ ಖಂಡ (13) ಕೋರುತ್ತದೆ.

(13) (ಎ) ವಿಶೇಷ ಆರ್ಥಿಕ ವಲಯದಲ್ಲಿ ಅಥವಾ ಮುಕ್ತ ವ್ಯಾಪಾರ ಉಗ್ರಾಣ ವಲಯದಲ್ಲಿ, ಉಗ್ರಾಣಿತ ಸರಕುಗಳನ್ನು, ರಫ್ತುಗಳಿಗೆ ಅಥವಾ ದೇಶೀಯ ಸುಂಕ ಕ್ಷೇತ್ರಕ್ಕೆ ತೆರವು ಮಾಡುವುದಕ್ಕೆ ಮುಂಚಿತವಾಗಿ, ಯಾವುದೇ ವ್ಯಕ್ತಿಗೆ ಪೂರೈಕೆ ಮಾಡುವುದನ್ನು ಸರಕುಗಳ ಪೂರೈಕೆಯು ಅಲ್ಲ ಸೇವೆಗಳ ಪೂರೈಕೆಯು ಅಲ್ಲ ಎಂದು ಪರಿಗಣಿಸತಕ್ಕದ್ದನ್ನು ನಿರ್ದಿಷ್ಟಪಡಿಸುವುದಕ್ಕಾಗಿ ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017ರ ಅನುಸೂಚಿ-IIIರ ಖಂಡಿಕೆ (8) ರಲ್ಲಿ ಒಂದು ಹೊಸ ಖಂಡ(ಎಎ)ಯನ್ನು ಸೇರಿಸುವುದಕ್ಕೆ ವಿಧೇಯಕದ ಖಂಡ (14) ಕೋರುತ್ತದೆ.

(ಬಿ) ಸದರಿ ಅನುಸೂಚಿಯ ವಿವರಣೆ-2 ನ್ನು, ಸದರಿ ವಿವರಣೆಯು ಸದರಿ ಅನುಸೂಚಿಯ ಖಂಡಿಕೆ (8)ರ ಖಂಡ (ಎ)ಗೆ ಸಂಬಂಧಿಸಿದಂತೆ ಅನ್ವಯವಾಗತಕ್ಕದ್ದು ಎಂದು ಸ್ಪಷ್ಟೀಕರಿಸುವುದಕ್ಕಾಗಿ ತಿದ್ದುಪಡಿ ಮಾಡಲು ಮತ್ತೂ ಕೋರುತ್ತದೆ.

(ಸಿ) ಸದರಿ ಅನುಸೂಚಿಯ ಪ್ರಸ್ತಾಪಿತ ಖಂಡಿಕೆ (8)ರ ಖಂಡ (ಎಎ)ನ ಉದ್ದೇಶಕ್ಕಾಗಿ "ವಿಶೇಷ ಆರ್ಥಿಕ ವಲಯ", "ಮುಕ್ತ ವ್ಯಾಪಾರ ಉಗ್ರಾಣ ವಲಯ" ಮತ್ತು "ದೇಶೀಯ ಸುಂಕ ಕ್ಷೇತ್ರ" ಪದಾವಳಿಗಳನ್ನು ಪರಿಭಾಷಿಸುವುದಕ್ಕಾಗಿ, ಸದರಿ ಅನುಸೂಚಿಯ ವಿವರಣೆ-3ನ್ನು ಸೇರಿಸುವುದಕ್ಕಾಗಿ ಮತ್ತೂ ಸಹ ಕೋರುತ್ತದೆ.

(ಡಿ) ಈ ತಿದ್ದುಪಡಿಗಳು ಜುಲೈ 2017ರ 1ನೇ ದಿನದಿಂದ ಪೂರ್ವಾನ್ವಯವಾಗುವಂತೆ ಜಾರಿಗೊಳ್ಳತಕ್ಕದ್ದು.

(14) ಮೇಲೆ ಹೇಳಲಾದ ಚಟುವಟಿಕೆಗಳು ಅಥವಾ ವ್ಯವಹಾರಗಳಿಗೆ ಸಂಬಂಧಿಸಿದಂತೆ ಈಗಾಗಲೇ ಸಂದಾಯ ಮಾಡಿರುವ ತೆರಿಗೆಯು ಮರುಪಾವತಿಗೆ ಲಭ್ಯವಿರತಕ್ಕದ್ದಲ್ಲ ಎಂದು ಸ್ಪಷ್ಟೀಕರಿಸಲು ವಿಧೇಯಕದ 15ನೇ ಖಂಡವು ಕೋರುತ್ತದೆ.

ಆದ್ದರಿಂದ, ಈ ವಿಧೇಯಕ.

ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

ಪ್ರತ್ಯಾಯೋಜಿತ ಶಾಸನ ರಚನಾಧಿಕಾರದ ಕುರಿತು ಜ್ಞಾಪನ ಪತ್ರ

ಖಂಡ 8	ಪ್ರಕರಣ 38ರ ಉಪಪ್ರಕರಣ (2) ಕ್ಕೆ ಸೇರ್ಪಡೆಗೊಳಿಸಲಾಗುತ್ತಿರುವ ಅಂಶ (ಸಿ) ರಾಜ್ಯ ಸರ್ಕಾರಕ್ಕೆ ಸ್ವಯಂ-ಜನ್ಯಗೊಂಡ ಹೇಳಿಕೆಗೆ ಅಗತ್ಯವಾದ ಇತರ ವಿವರಗಳನ್ನು ನಿಗದಿಪಡಿಸುವ ಅಧಿಕಾರವನ್ನು ನೀಡುತ್ತದೆ.
ಖಂಡ 13	ಪ್ರಕರಣ 148-ಎ ನ್ನು ಸೇರಿಸಲು ಪ್ರಸ್ತಾಪಿಸಲಾಗಿದೆ, ಇದರಲ್ಲಿ: (i) ಉಪಪ್ರಕರಣ (2) ರ ಖಂಡ (ಎ) ಯು ರಾಜ್ಯ ಸರ್ಕಾರಕ್ಕೆ ವಿಶಿಷ್ಟ ಗುರುತು ಗುರುತುವಿಕೆಯನ್ನು ಅಳವಡಿಸುವ ವ್ಯವಸ್ಥೆಯನ್ನು ಜಾರಿಗೆ ತರಲು ಬೇಕಾದ ವಿಧಾನವನ್ನು ನಿಗದಿಪಡಿಸಲು ಅಧಿಕಾರ ನೀಡುತ್ತದೆ; (ii) ಉಪಪ್ರಕರಣ (3) ರ ಖಂಡ (ಡಿ) ಯು ಉಪಪ್ರಕರಣ (2)ರಲ್ಲಿ ಉಲ್ಲೇಖಿಸಲಾದ ವ್ಯವಸ್ಥೆಯ ಕುರಿತು ಪಾವತಿಸಬೇಕಾದ ಮೊತ್ತವನ್ನು ನಿಗದಿಪಡಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ.

ಪ್ರಸ್ತಾವಿತ ಶಾಸನ ರಚನೆಯ ಪ್ರತ್ಯಾಯೋಜನೆಯು ವಾಡಿಕೆಯ ಸ್ವರೂಪದ್ದಾಗಿರುತ್ತದೆ.

ಸಿದ್ದರಾಮಯ್ಯ
ಮುಖ್ಯಮಂತ್ರಿ

ಕೆ.ಆರ್. ಮಹಾಲಕ್ಷ್ಮಿ
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಕರ್ನಾಟಕ ಸರಕು ಮತ್ತು ಸೇವೆಗಳ ತೆರಿಗೆ ಅಧಿನಿಯಮ, 2017

(2017ರ ಕರ್ನಾಟಕ ಅಧಿನಿಯಮ ಸಂಖ್ಯೆ: 27)ರ ಉದ್ಧೃತ ಭಾಗ

XXX XXX XXX

2. ಪರಿಭಾಷೆಗಳು.- XXX XXX XXX

(61) "ಹೂಡುವಳಿ ಸೇವೆ ಹಂಚಿಕೆದಾರ" ಎಂದರೆ, ಹೂಡುವಳಿ ಸೇವೆಗಳ ಸ್ವೀಕೃತಿ ಬಗ್ಗೆ ಪ್ರಕರಣ 31ರ ಅಡಿಯಲ್ಲಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆದಾರನು ನೀಡಿದ ತೆರಿಗೆ ಬೆಲೆಪಟ್ಟಿಗಳನ್ನು ಸ್ವೀಕರಿಸಿ ಸದರಿ ಸೇವೆಗಳ ಮೇಲೆ ಸಂದಾಯಮಾಡಿದ ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಏಕೀಕೃತ ತೆರಿಗೆ ಅಥವಾ ಕೇಂದ್ರಾಡಳಿತ ಪ್ರದೇಶ ತೆರಿಗೆಯ ಜಮೆಯನ್ನು ಸದರಿ ಕಛೇರಿಯ ಪ್ಯಾನ್ ಅನ್ನೇ ಹೊಂದಿರುವ ತೆರಿಗೆದಾಯಕ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆದಾರನಿಗೆ ಹಂಚುವ ಉದ್ದೇಶಕ್ಕಾಗಿ ನಿಗದಿತ ದಸ್ತಾವೇಜನ್ನು ನೀಡುವ ಆ ಪೂರೈಕೆದಾರನ ಕಛೇರಿ;

XXX XXX XXX

(69) "ಸ್ಥಳೀಯ ಪ್ರಾಧಿಕಾರ" ಎಂದರೆ:-

(ಎ) ಸಂವಿಧಾನದ ಅನುಚ್ಛೇದ 243ರ ಖಂಡ (ಡಿ) ದಲ್ಲಿ ಪರಿಭಾಷಿಸಿರುವಂತಹ ಒಂದು "ಪಂಚಾಯತ್" ;

(ಬಿ) ಸಂವಿಧಾನದ ಅನುಚ್ಛೇದ 243ಪಿ ಯ ಖಂಡ (ಇ) ದಲ್ಲಿ ಪರಿಭಾಷಿಸಿರುವಂತಹ ಒಂದು "ಪುರಸಭೆ" ;

(ಸಿ) ಪೌರಾಡಳಿತ ಅಥವಾ ಸ್ಥಳೀಯ ನಿಧಿಯ ನಿಯಂತ್ರಣ ಅಥವಾ ನಿರ್ವಹಣೆ ಮಾಡಲು ಕಾನೂನು ಬದ್ಧವಾದ ಹಕ್ಕುಳ್ಳಂತಹ ಅಥವಾ ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರದಿಂದ ವಹಿಸಿಕೊಡಲಾದ ಯಾವುದೇ ಪುರಸಭಾ ಸಮಿತಿ, ಜಿಲ್ಲಾ ಪರಿಷತ್, ಜಿಲ್ಲಾ ಮಂಡಳಿ ಮತ್ತು ಇತರ ಪ್ರಾಧಿಕಾರ;

(ಡಿ) ದಂಡು ಪ್ರದೇಶಗಳ ಅಧಿನಿಯಮ, 2006ರ (2006ರ ಕೇಂದ್ರ ಅಧಿನಿಯಮ 41) ಪ್ರಕರಣ 3 ರಲ್ಲಿ ಪರಿಭಾಷಿಸಿರುವಂತಹ ಒಂದು ದಂಡು ಪ್ರದೇಶ ಮಂಡಳಿ;

(ಇ) ಸಂವಿಧಾನದ ಆರನೇ ಅನುಸೂಚಿಯ ಅಡಿಯಲ್ಲಿ ರಚಿಸಲಾದ ಒಂದು ಪ್ರಾದೇಶಿಕ ಪರಿಷತ್ ಅಥವಾ ಒಂದು ಜಿಲ್ಲಾ ಪರಿಷತ್;

(ಎಫ್) ಸಂವಿಧಾನದ ಅನುಚ್ಛೇದ 371ರ 3[ಮತ್ತು ಅನುಚ್ಛೇದ 371ಜೆಯ]3ರಚಿಸಲಾದ ಒಂದು ಅಭಿವೃದ್ಧಿ ಮಂಡಳಿ ಅಥವಾ;

(ಜಿ) ಸಂವಿಧಾನದ ಅನುಚ್ಛೇದ 371ಎ ದ ಅಡಿಯಲ್ಲಿ ರಚಿಸಲಾದ ಒಂದು ಪ್ರಾದೇಶಿಕ ಪರಿಷತ್;

XXX XXX XXX

12. ಸರಕುಗಳ ಪೂರೈಕೆಯ ಸಮಯ.- XXX XXX XXX

(4) ಒಬ್ಬ ಪೂರೈಕೆದಾರನು ಮಾಡುವ ವೋಚರ್‌ಗಳ ಪೂರೈಕೆಯ ಸಂದರ್ಭದಲ್ಲಿ, ಪೂರೈಕೆಯ ಸಮಯವು,-

(ಎ) ಪೂರೈಕೆಯನ್ನು ಆ ಸಮಯದಲ್ಲಿಯೇ ಗುರುತಿಸಬಹುದಾದರೆ, ವೋಚರ್‌ನ್ನು ನೀಡಿದ ದಿನಾಂಕವಾಗಿರತಕ್ಕದ್ದು; ಅಥವಾ

(ಬಿ) ಎಲ್ಲಾ ಇತರ ಸಂದರ್ಭಗಳಲ್ಲಿ, ವೋಚರ್‌ನ್ನು ನಗದುಗೊಳಿಸುವ ದಿನಾಂಕವಾಗಿರತಕ್ಕದ್ದು.

XXX XXX XXX

13. ಸೇವೆಗಳ ಪೂರೈಕೆಯ ಸಮಯ.- XXX XXX XXX

(4) ಒಬ್ಬ ಪೂರೈಕೆದಾರನು ಮಾಡುವ ವೋಚರ್‌ಗಳ ಪೂರೈಕೆಯ ಸಂದರ್ಭದಲ್ಲಿ, ಪೂರೈಕೆಯ ಸಮಯವು,-

(ಎ) ಪೂರೈಕೆಯನ್ನು ಆ ಸಮಯದಲ್ಲಿಯೇ ಗುರುತಿಸಬಹುದಾದರೆ, ವೋಚರ್‌ನ್ನು ನೀಡಿದ ದಿನಾಂಕವಾಗಿರತಕ್ಕದ್ದು; ಅಥವಾ

(ಬಿ) ಎಲ್ಲಾ ಇತರ ಸಂದರ್ಭಗಳಲ್ಲಿ, ವೋಚರ್‌ನ್ನು ನಗದುಗೊಳಿಸುವ ದಿನಾಂಕವಾಗಿರತಕ್ಕದ್ದು.

XXX XXX XXX

17. ಜಮೆಯ ಹಂಚಿಕೆ ಮತ್ತು ತಡೆ ಹಿಡಿದ ಜಮೆಗಳು.- XXX XXX XXX

(5) ಪ್ರಕರಣ 16ರ ಉಪಪ್ರಕರಣ (1) ಮತ್ತು ಪ್ರಕರಣ 18ರ ಉಪಪ್ರಕರಣ (1) ರಲ್ಲಿ ಏನೇ ಒಳಗೊಂಡಿದ್ದರೂ ಈ ಕೆಳಕಂಡವುಗಳಿಗೆ ಸಂಬಂಧಿಸಿದಂತೆ ಹೂಡುವಳಿ ತೆರಿಗೆ ಜಮೆಯು ಲಭ್ಯವಿರತಕ್ಕದ್ದಲ್ಲ, ಎಂದರೆ:-

(ಎ) ಹದಿಮೂರು ವ್ಯಕ್ತಿಗಳಿಗಿಂತ (ಚಾಲಕನನ್ನು ಒಳಗೊಂಡಂತೆ) ಹೆಚ್ಚಿನದಲ್ಲದ ಆಸನದ ಸಾಮರ್ಥ್ಯದ ಅನುಮೋದನೆಯನ್ನು ಹೊಂದಿರುವ, ವ್ಯಕ್ತಿಗಳ ಸಾಗಾಣಿಕೆಯ ಮೋಟಾರು ವಾಹನಗಳು, ಈ ಕೆಳಗಿನವುಗಳಿಗಾಗಿ ಕೆಳಕಂಡ ತೆರಿಗೆದಾಯಕ ಪೂರೈಕೆಗಳನ್ನು ಮಾಡಲು, ಬಳಕೆಯಾದಾಗ ಹೊರತುಪಡಿಸಿದಂತೆ, ಎಂದರೆ:-

(ಅ) ಅಂಥ ಮೋಟಾರು ವಾಹನಗಳ ಮುಂದುವರೆದ ಪೂರೈಕೆ; ಅಥವಾ

(ಆ) ಪ್ರಯಾಣಿಕರ ಸಾಗಾಣಿಕೆ; ಅಥವಾ

(ಇ) ಅಂಥ ಮೋಟಾರು ವಾಹನಗಳ ಚಾಲನಾ ತರಬೇತಿಯನ್ನು ನೀಡುವುದು;

(ಎಎ) ನೌಕೆಗಳು ಮತ್ತು ವಿಮಾನ ಈ ಕೆಳಗಿನವುಗಳಿಗಾಗಿ ಬಳಕೆಯಾದಾಗ ಹೊರತುಪಡಿಸಿದಂತೆ:-

(i) ಕೆಳಕಂಡ ತೆರಿಗೆದಾಯಕ ಪೂರೈಕೆಗಳನ್ನು ಮಾಡಲು, ಎಂದರೆ:-

(ಎ) ಅಂಥ ನೌಕೆಗಳು ಮತ್ತು ವಿಮಾನಗಳ ಮುಂದುವರೆದ ಪೂರೈಕೆ; ಅಥವಾ

(ಬಿ) ಪ್ರಯಾಣಿಕರ ಸಾಗಾಣಿಕೆ; ಅಥವಾ

(ಸಿ) ಅಂಥ ನೌಕೆಗಳ ಯಾನದ ಕೌಶಲ್ಯಗಳ ತರಬೇತಿಯನ್ನು ನೀಡುವುದು; ಅಥವಾ

(ಡಿ) ಅಂಥ ವಿಮಾನದ ಹಾರಾಟ ಕೌಶಲ್ಯಗಳ ತರಬೇತಿಯನ್ನು ನೀಡುವುದು.

(ii) ಸರಕು ಸಾಗಾಣಿಕೆಗಾಗಿ;

(ಎಬಿ) ಖಂಡ (ಎ) ಅಥವಾ ಖಂಡ (ಎಎ)ನಲ್ಲಿ ಉಲ್ಲೇಖಿಸಿರುವ ಮೋಟಾರು ವಾಹನಗಳು, ನೌಕೆಗಳು ಅಥವಾ ವಿಮಾನಗಳಿಗೆ ಸಂಬಂಧಿಸಿದುದರಷ್ಟರ ಮಟ್ಟಿಗೆ ಸಾಮಾನ್ಯ ವಿಮೆ, ಸೇವೆ ನೀಡುವಿಕೆ, ದುರಸ್ತಿ ಕಾರ್ಯ ಮತ್ತು ನಿರ್ವಹಣಾ ಸೇವೆಗಳು:

ಪರಂತು, ಅಂಥ ಸೇವೆಗಳಿಗೆ ಸಂಬಂಧಿಸಿದಂತೆ ಹೂಡುವಳಿ ತೆರಿಗೆ ಜಮೆಯು ಕೆಳಕಂಡಂತಿದ್ದಾಗ ಲಭ್ಯವಿರತಕ್ಕದ್ದು,-

(i) ಖಂಡ (ಎ) ಅಥವಾ ಖಂಡ(ಎಎ)ನಲ್ಲಿ ಉಲ್ಲೇಖಿಸಿರುವ ಮೋಟಾರು ವಾಹನಗಳು, ನೌಕೆಗಳು ಅಥವಾ ವಿಮಾನಗಳು ಅದರಲ್ಲಿ ನಿರ್ದಿಷ್ಟಪಡಿಸಿರುವ ಉದ್ದೇಶಗಳಿಗಾಗಿ ಬಳಕೆಯಾಗಿದ್ದಲ್ಲಿ;

(ii) ಕೆಳಕಂಡವುಗಳಲ್ಲಿ ತೊಡಗಿಕೊಂಡಿರುವ ತೆರಿಗೆದಾಯಕ ವ್ಯಕ್ತಿಯಿಂದ ಸ್ವೀಕೃತವಾಗಿದ್ದಲ್ಲಿ,-

(I) ಅಂಥ ಮೋಟಾರು ವಾಹನಗಳು, ನೌಕೆಗಳು ಅಥವಾ ವಿಮಾನಗಳ ತಯಾರಿಕೆಯಲ್ಲಿ; ಅಥವಾ

(II) ಆತನಿಂದ ವಿಮೆ ಮಾಡಲಾದ ಅಂಥ ಮೋಟಾರು ವಾಹನಗಳು, ನೌಕೆಗಳು ಅಥವಾ ವಿಮಾನಗಳಿಗೆ ಸಂಬಂಧಿಸಿದ ಸಾಮಾನ್ಯ ವಿಮೆಯ ಪೂರೈಕೆಯಲ್ಲಿ;

(ಬಿ) ಈ ಕೆಳಕಂಡ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆ:-

(i) ಆಹಾರ ಮತ್ತು ಪಾನೀಯಗಳು, ಹೊರಾಂಗಣ ಆಹಾರ ಸರಬರಾಜು, ಸೌಂದರ್ಯಚಿಕಿತ್ಸೆ, ಆರೋಗ್ಯ ಸೇವೆಗಳು, ಸೌಂದರ್ಯವರ್ಧಕ ಮತ್ತು ಸುರೂಪಿಕಾ ಶಸ್ತ್ರಚಿಕಿತ್ಸೆ (plastic surgery), ಖಂಡ (ಎ) ಅಥವಾ

ಖಂಡ(ಎಎ)ನಲ್ಲಿ ಉಲ್ಲೇಖಿಸಿರುವ ಮೋಟಾರು ವಾಹನಗಳು, ನೌಕೆಗಳು ಅಥವಾ ವಿಮಾನಗಳನ್ನು ಭೋಗ್ಯಕ್ಕೆ, ಗೇಣಿಗೆ ಅಥವಾ ಬಾಡಿಗೆಗೆ ನೀಡುವುದು, ಅದರಲ್ಲಿ ನಿರ್ದಿಷ್ಟಪಡಿಸಿರುವ ಉದ್ದೇಶಗಳಿಗಾಗಿ ಬಳಕೆಯಾಗುವುದನ್ನು ಹೊರತುಪಡಿಸಿದಂತೆ, ಜೀವ ವಿಮೆ ಮತ್ತು ಆರೋಗ್ಯ ವಿಮೆ:

ಪರಂತು, ಒಬ್ಬ ನೋಂದಾಯಿತ ವ್ಯಕ್ತಿಯಿಂದ ಅಂಥ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಒಂದು ಒಳಮುಖ ಪೂರೈಕೆಯನ್ನು, ಅಂಥ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಹೊರಮುಖ ತೆರಿಗೆದಾಯಕ ಪೂರೈಕೆಯನ್ನು ಮಾಡಲು ಅಥವಾ ತೆರಿಗೆದಾಯಕ ಸಂಯುಕ್ತ ಅಥವಾ ಮಿಶ್ರ ಪೂರೈಕೆಯ ಭಾಗವಾಗಿ ಬಳಸಿದಲ್ಲಿ, ಅಂಥ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡಕ್ಕೆ ಸಂಬಂಧಿಸಿದಂತೆ ಹೂಡುವಳಿ ತೆರಿಗೆ ಜಮೆ ಲಭ್ಯವಿರತಕ್ಕದ್ದು;

(ii) ಒಂದು ಕ್ಲಬ್, ಆರೋಗ್ಯ ಹಾಗೂ ಫಿಟ್ನೆಸ್ ಕೇಂದ್ರದ ಸದಸ್ಯತ್ವ; ಮತ್ತು

(iii) ರಜೆಯಲ್ಲಿರುವ ಉದ್ಯೋಗಿಗಳಿಗೆ ನೀಡಲಾದ ರಜೆ ಪ್ರಯಾಣದ ರಿಯಾಯಿತಿ ಅಥವಾ ಸ್ವಗ್ರಾಮ ಪ್ರಯಾಣ ರಿಯಾಯಿತಿಯಂತಹ ಪ್ರಯಾಣದ ಅನುಕೂಲತೆಗಳು:

ಪರಂತು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಉದ್ಯೋಗದಾತನು ತನ್ನ ಉದ್ಯೋಗಿಗಳಿಗೆ ಒದಗಿಸಲು ಬಾಧ್ಯವಿರುವಂತಹ, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡಕ್ಕೆ ಸಂಬಂಧಿಸಿದಂತೆ ಹೂಡುವಳಿ ತೆರಿಗೆ ಜಮೆ ಲಭ್ಯವಿರತಕ್ಕದ್ದು

(ಸಿ) ಗುತ್ತಿಗೆ ಕಾಮಗಾರಿಯ ಮುಂದುವರೆದ ಪೂರೈಕೆಗಾಗಿ ಹೂಡುವಳಿ ಸೇವೆಯಾಗಿರುವುದನ್ನು ಹೊರತುಪಡಿಸಿದಂತೆ ಸ್ಥಿರಸ್ವತ್ತಿನ ನಿರ್ಮಾಣಕ್ಕಾಗಿ (ಸ್ಥಾವರ ಮತ್ತು ಯಂತ್ರೋಪಕರಣಗಳನ್ನು ಹೊರತುಪಡಿಸಿದಂತೆ) ಮಾಡಿದ ಗುತ್ತಿಗೆ ಕಾಮಗಾರಿ ಸೇವೆಗಳ ಪೂರೈಕೆ;

(ಡಿ) ಒಬ್ಬ ತೆರಿಗೆದಾಯಕ ವ್ಯಕ್ತಿಯು ತನ್ನ ಸ್ವಂತ ಖಾತೆಯ ಮೇಲೆ ಒಂದು ಸ್ಥಿರ ಸ್ವತ್ತಿನ (ಸ್ಥಾವರ ಅಥವಾ ಯಂತ್ರೋಪಕರಣಗಳನ್ನು ಹೊರತುಪಡಿಸಿದಂತೆ) ನಿರ್ಮಾಣಕ್ಕಾಗಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು, ಅಂಥ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡನ್ನು ವ್ಯವಹಾರದ ಪಥದಲ್ಲಿ ಅಥವಾ ಮುಂದುವರಿಕೆಯಲ್ಲಿ ಬಳಕೆಮಾಡಿರುವುದನ್ನೂ ಒಳಗೊಂಡಂತೆ, ಸ್ವೀಕರಿಸಿರುವುದು;

ವಿವರಣೆ:- ಖಂಡ (ಸಿ) ಮತ್ತು ಖಂಡ (ಡಿ)ಗಳ ಉದ್ದೇಶಗಳಿಗಾಗಿ, 'ನಿರ್ಮಾಣ' ಎಂಬ ಪದವು ಬಂಡವಾಳೀಕೃತಗೊಂಡಿರುವ ಅಷ್ಟರ ಮಟ್ಟಿಗೆ, ಸದರಿ ಸ್ಥಿರಸ್ವತ್ತಿಗೆ ಮಾಡಿರುವ ಪುನರ್-ನಿರ್ಮಾಣ, ನವೀಕರಣ, ಸೇರ್ಪಡೆಗಳು ಅಥವಾ ಮಾರ್ಪಾಟುಗಳು ಅಥವಾ ದುರಸ್ತಿಗಳನ್ನು ಒಳಗೊಳ್ಳುತ್ತದೆ.

(ಇ) ಪ್ರಕರಣ 10ರ ಅಡಿಯಲ್ಲಿ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಮೇಲೆ ಸಂದಾಯ ಮಾಡಲಾದ ತೆರಿಗೆ;

(ಎಫ್) ಒಬ್ಬ ಅನಿವಾಸಿ ತೆರಿಗೆದಾಯಕ ವ್ಯಕ್ತಿಯಿಂದ, ಆತನಿಂದ ಆಮದಾಗಿರುವ ಸರಕನ್ನು ಹೊರತುಪಡಿಸಿದಂತೆ, ಸ್ವೀಕರಿಸಲ್ಪಟ್ಟ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡು;

(ಎಫ್ಎ) ಕಂಪನಿ ಅಧಿನಿಯಮ, 2013 (2013ರ ಕೇಂದ್ರ ಅಧಿನಿಯಮ 18)ರ ಪ್ರಕರಣ 135ರಲ್ಲಿ ಉಲ್ಲೇಖಿಸಿರುವಂತೆ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯ ಅಡಿಯಲ್ಲಿ ಆತನ ಬಾಧ್ಯತೆಗೆ ಸಂಬಂಧಿಸಿದ ಚಟುವಟಿಕೆಗಳಿಗೆ ಬಳಸಲಾದ ಅಥವಾ ಬಳಸಲು ಉದ್ದೇಶಿಸಲಾದ ಒಬ್ಬ ತೆರಿಗೆದಾಯಕ ವ್ಯಕ್ತಿಯಿಂದ, ಸ್ವೀಕರಿಸಲ್ಪಟ್ಟ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡು;

(ಜಿ) ವೈಯಕ್ತಿಕ ಅನುಭೋಗಕ್ಕಾಗಿ ಉಪಯೋಗಿಸಿದ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡು;

(ಹೆಚ್) ಕಳೆದುಹೋದ, ಕಳ್ಳತನವಾದ, ನಾಶಗೊಂಡ, ಲೆಕ್ಕದಿಂದ ತೆಗೆದುಹಾಕಿದ ಅಥವಾ ಉಡುಗೊರೆಯಾಗಿ ಅಥವಾ ಉಚಿತ ಮಾದರಿಗಳಾಗಿ ವಿಲೇ ಮಾಡಲಾದ ಸರಕುಗಳು; ಮತ್ತು

(ಐ) ಹಣಕಾಸು ವರ್ಷ 2023-24ರವರೆಗಿನ ಯಾವುದೇ ಅವಧಿಗೆ ಸಂಬಂಧಿಸಿದಂತೆ ಪ್ರಕರಣ 74ರ ಉಪಬಂಧಗಳಿಗೆ ಅನುಸಾರವಾಗಿ ಸಂದಾಯ ಮಾಡಲಾದ ಯಾವುದೇ ತೆರಿಗೆ.

XXX XXX XXX

20. ಹೂಡುವಳಿ ಸೇವೆ ಹಂಚಿಕೆದಾರನಿಂದ ಜಮೆಯ ಹಂಚಿಕೆಯ ವಿಧಾನ.- (1) ಪ್ರಕರಣ 9ರ ಉಪ-ಪ್ರಕರಣ (3) ಅಥವಾ ಉಪಪ್ರಕರಣ (4)ರ ಅಡಿಯಲ್ಲಿ ತೆರಿಗೆಗೆ ಬಾಧ್ಯವಾಗುವ ಸೇವೆಗಳಿಗೆ ಸಂಬಂಧಿಸಿದ ಬೆಲೆಪಟ್ಟಿಗಳನ್ನು ಒಳಗೊಂಡಂತೆ, ಪ್ರಕರಣ 25ರಲ್ಲಿ ಉಲ್ಲೇಖಿಸಲಾದ ವಿಭಿನ್ನ ವ್ಯಕ್ತಿಗಳಿಗಾಗಿ ಅಥವಾ ಅವರ ಪರವಾಗಿ ಹೂಡುವಳಿ ಸೇವೆಗಳ ಸ್ವೀಕೃತಿ ಬಗ್ಗೆ ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ

ಪೂರೈಕೆದಾರನು ನೀಡಿದ ತೆರಿಗೆ ಬೆಲೆಪಟ್ಟಿಗಳನ್ನು ಸ್ವೀಕರಿಸುವ ಯಾವುದೇ ಪೂರೈಕೆದಾರರ ಕಛೇರಿಯು, ಸದರಿ ಅಧಿನಿಯಮದ ಪ್ರಕರಣ 24ರ ಖಂಡ (viii)ರ ಅಡಿಯಲ್ಲಿ ಹೂಡುವಳಿ ಸೇವೆ ಹಂಚಿಕೆದಾರನೆಂದು ನೋಂದಾಯಿಸಿಕೊಳ್ಳುವುದು ಅಗತ್ಯವಾಗಿರತಕ್ಕದ್ದು ಮತ್ತು ಅಂಥ ಬೆಲೆಪಟ್ಟಿಗಳಿಗೆ ಸಂಬಂಧಿಸಿದಂತೆ ಹೂಡುವಳಿ ತೆರಿಗೆ ಜಮೆಯನ್ನು ಹಂಚಿಕೆ ಮಾಡತಕ್ಕದ್ದು.

(2) ಅದೇ ರಾಜ್ಯದಲ್ಲಿ ಹೂಡುವಳಿ ಸೇವೆ ಹಂಚಿಕೆದಾರರಾಗಿ ನೋಂದಾಯಿಸಿರುವ ವಿಭಿನ್ನ ವ್ಯಕ್ತಿಯಿಂದ ಪ್ರಕರಣ 9ರ ಉಪ-ಪ್ರಕರಣ (3) ಅಥವಾ ಉಪ-ಪ್ರಕರಣ (4)ರ ಅಡಿಯಲ್ಲಿ ತೆರಿಗೆಗೆ ಬಾಧ್ಯವಾಗುವ ಸೇವೆಗಳಿಗೆ ಸಂಬಂಧಿಸಿದಂತೆ ಸಂದಾಯ ಮಾಡಿದ ರಾಜ್ಯ ಅಥವಾ ಏಕೀಕೃತ ತೆರಿಗೆ ಜಮೆಯನ್ನು ಒಳಗೊಂಡಂತೆ, ಆತನಿಂದ ಸ್ವೀಕರಿಸಿದ ಬೆಲೆಪಟ್ಟಿಗಳ ಮೇಲೆ ವಿಧಿಸಲಾದ ರಾಜ್ಯ ಅಥವಾ ಏಕೀಕೃತ ತೆರಿಗೆ ಜಮೆಯನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ, ಅಂಥ ಅವಧಿಯ ಒಳಗಾಗಿ ಮತ್ತುಅಂಥ ನಿರ್ಬಂಧಗಳು ಮತ್ತು ಷರತ್ತಿಗೊಳಪಟ್ಟು ಹಂಚಿಕೆ ಮಾಡತಕ್ಕದ್ದು.

(3) ಹೂಡುವಳಿ ಸೇವೆ ಹಂಚಿಕೆದಾರನು ಹೂಡುವಳಿ ತೆರಿಗೆ ಜಮೆಯ ಮೊತ್ತವನ್ನು ಒಳಗೊಂಡಿರುವ ದಸ್ತಾವೇಜನ್ನು ನೀಡುವುದರ ಮೂಲಕ ರಾಜ್ಯ ತೆರಿಗೆ ಜಮೆಯನ್ನು ರಾಜ್ಯ ತೆರಿಗೆ ಅಥವಾ ಏಕೀಕೃತ ತೆರಿಗೆಯನ್ನಾಗಿ ಮತ್ತು ಏಕೀಕೃತ ತೆರಿಗೆ ಜಮೆಯನ್ನು ಏಕೀಕೃತ ತೆರಿಗೆ ಅಥವಾ ರಾಜ್ಯ ತೆರಿಗೆಯನ್ನಾಗಿ ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಹಂಚಿಕೆ ಮಾಡತಕ್ಕದ್ದು.

XXX XXX XXX

34. ಜಮೆ ಮತ್ತು ಖರ್ಚು ಚೀಟಿಗಳು.- XXX XXX XXX

(2) ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಪೂರೈಕೆಗೆ ಸಂಬಂಧಿಸಿದಂತೆ ಒಂದು ಜಮೆ ಚೀಟಿಯನ್ನು ನೀಡುವಂತಹ ಯಾವುದೇ ನೋಂದಾಯಿತ ವ್ಯಕ್ತಿಯು ಅಂಥ ಜಮೆ ಚೀಟಿಯನ್ನು ನೀಡಲಾಗಿರುವ ಆ ತಿಂಗಳಿನ, ಆದರೆ ಅಂತಹ ಪೂರೈಕೆ ಮಾಡಿದ ಹಣಕಾಸು ವರ್ಷ ಕೊನೆಗೊಂಡ ತರುವಾಯದ ನವೆಂಬರ್ ತಿಂಗಳಿನ ಮೂವತ್ತನೇ ದಿನ ಅಥವಾ ಸಂಬಂಧಿಸಿದ ವಾರ್ಷಿಕ ರಿಟರ್ನ್ ಒದಗಿಸಿದ ದಿನಾಂಕ, ಇವುಗಳಲ್ಲಿ ಯಾವುದು ಮೊದಲೋ ಆ ತಿಂಗಳ ನಂತರದಲ್ಲದ, ರಿಟರ್ನ್‌ನಲ್ಲಿ ಅಂಥ ಜಮೆ ಚೀಟಿಯ ವಿವರಗಳನ್ನು ಘೋಷಿಸತಕ್ಕದ್ದು ಮತ್ತು ತೆರಿಗೆ ಬಾಧ್ಯತೆಯನ್ನು ನಿಯಮಿಸಬಹುದಾದ ಅಂಥ ವಿಧಾನದಲ್ಲಿ ಹೊಂದಾಣಿಕೆ ಮಾಡತಕ್ಕದ್ದು:

ಪರಂತು, ಅಂಥ ಪೂರೈಕೆಯ ತೆರಿಗೆ ಮತ್ತು ಬಡ್ಡಿಯ ಹೊರೆಯು ಆತನಿಂದ ಯಾವುದೇ ಇತರ ವ್ಯಕ್ತಿಗೆ ವರ್ಗಾಯಿಸಲಾಗಿದ್ದರೆ, ಪೂರೈಕೆದಾರನ ಹುಟ್ಟುವಳಿ ತೆರಿಗೆ ಬಾಧ್ಯತೆಯಲ್ಲಿನ ಇಳಿಕೆಯನ್ನು ಅನುಮತಿಸತಕ್ಕದ್ದಲ್ಲ.

XXX XXX XXX

38. ಒಳಮುಖ ಪೂರೈಕೆಗಳ ವಿವರಗಳ ತಿಳಿಸುವಿಕೆ ಮತ್ತು ಹೂಡುವಳಿ ತೆರಿಗೆ ಜಮೆ.- (1) ಪ್ರಕರಣ 37ರ ಉಪ ಪ್ರಕರಣ (1)ರ ಅಡಿಯಲ್ಲಿ ನೋಂದಾಯಿತ ವ್ಯಕ್ತಿಗಳಿಂದ ಒದಗಿಸಲಾದ ಹೊರಮುಖ ಪೂರೈಕೆಗಳ ವಿವರಗಳು ಮತ್ತು ನಿಯಮಿಸಬಹುದಾದ ಅಂಥ ಇತರೆ ಪೂರೈಕೆಗಳು, ಮತ್ತು ಹೂಡುವಳಿ ತೆರಿಗೆ ಜಮೆ ವಿವರಗಳನ್ನು ಒಳಗೊಂಡ ಸ್ವಯಂ-ಜನ್ಯಗೊಂಡ ವಿವರ ಪತ್ರದ ವಿವರಗಳನ್ನು, ನಿಯಮಿಸಬಹುದಾದ ಅಂಥ ನಮೂನೆ ಮತ್ತು ವಿಧಾನದಲ್ಲಿ, ಅಂಥ ಸಮಯದ ಒಳಗಾಗಿ, ಮತ್ತು ಅಂಥ ಷರತ್ತು ಹಾಗೂ ನಿರ್ಬಂಧಗಳಿಗೆ ಒಳಪಟ್ಟು ಅಂತಹ ಪೂರೈಕೆಗಳ ಸ್ವೀಕೃತಿದಾರರಿಗೆ ವಿದ್ಯುನ್ಮಾನ ರೂಪದಲ್ಲಿ ಲಭ್ಯವಾಗುವಂತೆ ಮಾಡತಕ್ಕದ್ದು.

(2) ಉಪಪ್ರಕರಣ (1)ರ ಅಡಿಯಲ್ಲಿ ಸ್ವಯಂ-ಜನ್ಯಗೊಂಡ ವಿವರ ಪತ್ರವು ಈ ಕೆಳಕಂಡವುಗಳನ್ನು ಒಳಗೊಂಡಿರತಕ್ಕದ್ದು,-

(ಎ) ಸ್ವೀಕೃತಿದಾರನಿಗೆ ಲಭ್ಯವಿರಬಹುದಾದ ಹೂಡುವಳಿ ತೆರಿಗೆ ಜಮೆಗೆ ಸಂಬಂಧಿಸಿದ ಒಳಮುಖ ಪೂರೈಕೆಯ ವಿವರಗಳು; ಮತ್ತು

(ಬಿ) ಪ್ರಕರಣ 37ರ ಉಪಪ್ರಕರಣ (1)ರ ಅಡಿಯಲ್ಲಿ ಒದಗಿಸಲಾದ ಸದರಿ ಪೂರೈಕೆಗಳ ವಿವರಗಳ ಕಾರಣದಿಂದಾಗಿ, ಸ್ವೀಕೃತಿದಾರನಿಂದ ಪೂರ್ಣವಾಗಿ ಅಥವಾ ಭಾಗಶಃವಾಗಿಯಾದರೂ ಸಹ ಜಮೆಯನ್ನು ಉಪಯೋಗಿಸಿಕೊಳ್ಳಲು ಸಾಧ್ಯವಿಲ್ಲದಿರುವಂಥ ಜಮೆಗೆ ಸಂಬಂಧಿಸಿದಂತೆ ಈ ಕೆಳಕಂಡವರಿಂದ ಮಾಡಲ್ಪಟ್ಟ ಪೂರೈಕೆಗಳ ವಿವರಗಳು,-

(i) ನಿಯಮಿಸಬಹುದಾದ ಅಂಥ ಅವಧಿಯಲ್ಲಿ ನೋಂದಣಿಯನ್ನು ತೆಗೆದುಕೊಂಡಿರುವ ಯಾವುದೇ ನೋಂದಾಯಿತ ವ್ಯಕ್ತಿಯಿಂದ; ಅಥವಾ

(ii) ತೆರಿಗೆ ಸಂದಾಯ ಮಾಡಲು ತಪ್ಪಿರುವ ಮತ್ತು ನಿಯಮಿಸಬಹುದಾದಂಥ ಮುಂದುವರೆದ ಅವಧಿಯವರೆಗೆ ಅಂಥ ತಪ್ಪಿರುವಿಕೆಯು ಮುಂದುವರೆದಿದ್ದರೆ ಆ ಯಾವುದೇ ನೋಂದಾಯಿತ ವ್ಯಕ್ತಿಯಿಂದ; ಅಥವಾ

(iii) ನಿಯಮಿಸಬಹುದಾದ ಅಂಥ ಅವಧಿಯಲ್ಲಿ ಸದರಿ ಉಪಪ್ರಕರಣದ ಮೇರೆಗೆ ಆತನಿಂದ ಒದಗಿಸಿದ ಹೊರಮುಖ ಪೂರೈಕೆಗಳ ವಿವರಪತ್ರದನುಸಾರ ಸಂದಾಯದಾಯಕ ಹೊರಮುಖ ಪೂರೈಕೆಯು, ಸದರಿ ಅವಧಿಯಲ್ಲಿ ನಿಯಮಿಸಬಹುದಾದಂಥ ಮಿತಿಯೊಳಗೆ ಆತನಿಂದ ಸಂದಾಯ ಮಾಡಿದ ಹೊರಮುಖ ತೆರಿಗೆಯನ್ನು ಮೀರಿರುವ ಯಾವುದೇ ನೋಂದಾಯಿತ ವ್ಯಕ್ತಿಯಿಂದ; ಅಥವಾ

(iv) ನಿಯಮಿಸಬಹುದಾದ ಅಂಥ ಅವಧಿಯಲ್ಲಿ ಉಪಯೋಗಿಸಿಕೊಂಡಿರುವ ಹೂಡುವಳಿ ತೆರಿಗೆ ಜಮೆಯ ಮೊತ್ತವು, ಸದರಿ ಅವಧಿಯಲ್ಲಿ ನಿಮಿಸಬಹುದಾದ ಅಂಥ ಮಿತಿಯೊಳಗೆ ಆತನಿಂದ ಖಂಡ (ಎ)ಯನುಸಾರ ಉಪಯೋಗಿಸಿಕೊಳ್ಳಬಹುದಾದ ಜಮೆಯನ್ನು ಮೀರಿರುವ ಯಾವುದೇ ನೋಂದಾಯಿತ ವ್ಯಕ್ತಿಯಿಂದ; ಅಥವಾ

(v) ನಿಯಮಿಸಬಹುದಾದಂಥ ಷರತ್ತುಗಳು ಮತ್ತು ನಿರ್ಭಂಧಗಳಿಗೆ ಒಳಪಟ್ಟು, ಪ್ರಕರಣ 49ರ ಉಪಪ್ರಕರಣ (12)ರ ಉಪಬಂಧಗಳಿಗೆ ಅನುಸಾರವಾಗಿ ಆತನ ತೆರಿಗೆ ಬಾಧ್ಯತೆಯನ್ನು ವಿಮೋಚಿಸಲು ತಪ್ಪಿರುವ ಯಾವುದೇ ನೋಂದಾಯಿತ ವ್ಯಕ್ತಿಯಿಂದ; ಅಥವಾ

(vi) ನಿಯಮಿಸಬಹುದಾದ ಅಂಥ ಇತರೆ ವರ್ಗದ ವ್ಯಕ್ತಿಗಳಿಂದ.

XXX XXX XXX

39. ರಿಟರ್ನ್‌ಗಳನ್ನು ಒದಗಿಸುವುದು.- (1) ಒಬ್ಬ ಹೂಡುವಳಿ ಸೇವೆ ಹಂಚಿಕೆದಾರ ಅಥವಾ ಒಬ್ಬ ಅನಿವಾಸಿ ತೆರಿಗೆದಾಯಕ ವ್ಯಕ್ತಿ ಅಥವಾ ಪ್ರಕರಣ 10 ಅಥವಾ ಪ್ರಕರಣ 51 ಅಥವಾ ಪ್ರಕರಣ 52ರ ಉಪಬಂಧಗಳ ಅಡಿಯಲ್ಲಿ ತೆರಿಗೆ ಸಂದಾಯ ಮಾಡುವ ಒಬ್ಬ ವ್ಯಕ್ತಿಯನ್ನು ಹೊರತುಪಡಿಸಿ ಪ್ರತಿಯೊಬ್ಬ ನೋಂದಾಯಿತ ವ್ಯಕ್ತಿಯು, ಪ್ರತಿಯೊಂದು ಕ್ಯಾಲೆಂಡರ್ ತಿಂಗಳು ಅಥವಾ ಅದರ ಭಾಗಕ್ಕೆ, ಸರಕು ಅಥವಾ ಸೇವೆಗಳು ಅಥವಾ ಅವುಗಳೆರಡರ ಒಳಮುಖ ಮತ್ತು ಹೊರಮುಖ ಪೂರೈಕೆಗಳು, ಉಪಯೋಗಿಸಿದ ಹೂಡುವಳಿ ತೆರಿಗೆ ಜಮೆ, ಸಂದಾಯ ಮಾಡಬೇಕಾದ ತೆರಿಗೆ, ಸಂದಾಯ ಮಾಡಿದ ತೆರಿಗೆ ಮತ್ತು ನಿಯಮಿಸಬಹುದಾದ ಅಂಥ ಇತರ ವಿವರಗಳ ಒಂದು ರಿಟರ್ನ್‌ನ್ನು, ನಿಯಮಿಸಬಹುದಾದ ಅಂಥ ನಮೂನೆ ಮತ್ತು ವಿಧಾನದಲ್ಲಿ ಮತ್ತು ಅಂಥ ಸಮಯದೊಳಗಾಗಿ, ವಿದ್ಯುನ್ಮಾನ ರೀತಿಯಲ್ಲಿ, ಒದಗಿಸತಕ್ಕದ್ದು:

ಪರಂತು, ಸರ್ಕಾರವು ಪರಿಷತ್ತಿನ ಶಿಫಾರಸ್ಸುಗಳ ಅನ್ವಯ, ಅಂಥ ಷರತ್ತುಗಳು ಮತ್ತು ನಿಬಂಧನೆಗಳಿಗೆ ಒಳಪಟ್ಟು, ಪ್ರತಿ ತ್ರೈಮಾಸಿಕ ಅಥವಾ ಅದರ ಭಾಗಕ್ಕಾಗಿ ಒಂದು ರಿಟರ್ನ್‌ನ್ನು, ಒದಗಿಸತಕ್ಕ ನೋಂದಾಯಿತ ವ್ಯಕ್ತಿಗಳ ನಿರ್ದಿಷ್ಟ ವರ್ಗವನ್ನು ಅಧಿಸೂಚಿಸಬಹುದು.

XXX XXX XXX

107. ಅಪೀಲು ಪ್ರಾಧಿಕಾರಕ್ಕೆ ಅಪೀಲುಗಳು.- XXX XXX XXX

(6) ಅಪೀಲುದಾರನು ಈ ಕೆಳಗಿನವುಗಳನ್ನು ಸಂದಾಯ ಮಾಡಿದ ಹೊರತು ಉಪಪ್ರಕರಣ (1)ರ ಅಡಿಯಲ್ಲಿ ಅಪೀಲನ್ನು ಸಲ್ಲಿಸುವ ಹಾಗಿಲ್ಲ,-

(ಎ) ಆಕ್ಷೇಪಿತ ಆದೇಶದಿಂದ ಉದ್ಭವಿಸಿರುವ ತೆರಿಗೆ, ಬಡ್ಡಿ, ಜುಲ್ಮಾನೆ, ಶುಲ್ಕ ಮತ್ತು ದಂಡದ ಮೊತ್ತದಲ್ಲಿ ಆತನಿಂದ ಒಪ್ಪಿಕೊಂಡಿರುವ ಅಂಥ ಭಾಗವನ್ನು, ಪೂರ್ಣವಾಗಿ; ಮತ್ತು

(ಬಿ) ಅಪೀಲು ಸಲ್ಲಿಸಲಾಗಿರುವುದಕ್ಕೆ ಸಂಬಂಧಿಸಿದಂತಹ ಸದರಿ ಆದೇಶದಿಂದ ಉದ್ಭವಿಸಿರುವ ವಿವಾದದಲ್ಲಿರುವ ತೆರಿಗೆಯ ಉಳಿದ ಮೊತ್ತದ ಶೇಕಡಾ ಹತ್ತರಷ್ಟಕ್ಕೆ ಸಮನಾದ ಇಪ್ಪತ್ತು ಕೋಟಿ ರೂಪಾಯಿಗಳ ಗರಿಷ್ಠ ಮಿತಿಗೆ ಒಳಪಟ್ಟ ಒಂದು ಮೊಬಲಗು.

ಪರಂತು, ಯಾರೇ ಅಪೀಲುದಾರನು, ದಂಡದ ಶೇಕಡಾ ಇಪ್ಪತ್ತೈದರಷ್ಟಕ್ಕೆ ಸಮನಾದ ಮೊತ್ತವನ್ನು ಸಂದಾಯ ಮಾಡಿದ ಹೊರತು 129ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿನ ಆದೇಶದ ವಿರುದ್ಧ ಯಾವುದೇ ಅಪೀಲನ್ನು ಸಲ್ಲಿಸತಕ್ಕದ್ದಲ್ಲ.

XXX XXX XXX

112. ಅಪೀಲು ನ್ಯಾಯಾಧಿಕರಣಕ್ಕೆ ಅಪೀಲುಗಳು.- XXX XXX XXX

(8) ಅಪೀಲುದಾರನು ಈ ಕೆಳಗಿನವುಗಳನ್ನು ಸಂದಾಯ ಮಾಡಿದ ಹೊರತು ಉಪಪ್ರಕರಣ (1)ರ ಅಡಿಯಲ್ಲಿ ಅಪೀಲನ್ನು ಸಲ್ಲಿಸುವ ಹಾಗಿಲ್ಲ,–

(ಎ) ಆಕ್ಷೇಪಿತ ಆದೇಶದಿಂದ ಉದ್ಭವಿಸಿರುವ ತೆರಿಗೆ, ಬಡ್ಡಿ, ಜುಲ್ಮಾನೆ, ಶುಲ್ಕ ಮತ್ತು ದಂಡದ ಮೊತ್ತದಲ್ಲಿ ಆತನಿಂದ ಒಪ್ಪಿಕೊಂಡಿರುವ ಅಂಥ ಭಾಗವನ್ನು, ಪೂರ್ಣವಾಗಿ; ಮತ್ತು

(ಬಿ) ಪ್ರಕರಣ 107ರ ಉಪಪ್ರಕರಣ (6)ರ ಅಡಿಯಲ್ಲಿ ಸಂದಾಯ ಮಾಡಿದ ಮೊತ್ತಕ್ಕೆ ಹೆಚ್ಚುವರಿಯಾಗಿ ಅಪೀಲು ಸಲ್ಲಿಸಲಾಗಿರುವುದಕ್ಕೆ ಸಂಬಂಧಿಸಿದಂತಹ ಸದರಿ ಆದೇಶದಿಂದ ಉದ್ಭವಿಸಿರುವ ವಿವಾದದಲ್ಲಿರುವ ತೆರಿಗೆಯ ಉಳಿದ ಮೊತ್ತದ ಶೇಕಡಾ ಹತ್ತರಷ್ಟಕ್ಕೆ ಸಮಾನಾದ ಇಪ್ಪತ್ತು ಕೋಟಿ ರೂಪಾಯಿಗಳ ಗರಿಷ್ಠ ಮಿತಿಗೆ ಒಳಪಟ್ಟ ಒಂದು ಮೊಬಲಗು.

XXX XXX XXX

ಅನುಸೂಚಿ-III

[ಪ್ರಕರಣ 7ನ್ನು ನೋಡಿ]

ಸರಕುಗಳ ಪೂರೈಕೆಯೂ ಅಲ್ಲ ಅಥವಾ ಸೇವೆಗಳ ಪೂರೈಕೆಯೂ ಅಲ್ಲ ಎಂದು ಪರಿಗಣಿಸಬೇಕಾದ ಚಟುವಟಿಕೆಗಳುಅಥವಾ ವ್ಯವಹಾರಗಳು

1. ಆತನ ಉದ್ಯೋಗದ ಕ್ರಮದಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಒಬ್ಬ ಉದ್ಯೋಗಿಯಿಂದ ಉದ್ಯೋಗದಾತನಿಗೆ ಒದಗಿಸುವ ಸೇವೆಗಳು.

2. ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ಸ್ಥಾಪಿತವಾಗಿರುವ ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಧಿಕರಣವು ಒದಗಿಸುವ ಸೇವೆಗಳು.

3. (ಎ) ಸಂಸತ್ ಸದಸ್ಯರಿಂದ, ರಾಜ್ಯ ಶಾಸನ ಸಭೆಗಳ ಸದಸ್ಯರಿಂದ, ಪಂಚಾಯಿತಿಗಳ ಸದಸ್ಯರಿಂದ, ಪುರಸಭೆಗಳ ಸದಸ್ಯರಿಂದ, ಮತ್ತು ಇತರ ಸ್ಥಳೀಯ ಪ್ರಾಧಿಕಾರಗಳ ಸದಸ್ಯರಿಂದ ನೆರವೇರಿಸುವ ಪ್ರಕಾರ್ಯಗಳು;

(ಬಿ) ಸಂವಿಧಾನದ ಉಪಬಂಧಗಳಿಗೆ ಅನುಗುಣವಾಗಿ ಆ ಸಾಮರ್ಥ್ಯದಲ್ಲಿ ಯಾವುದೇ ಹುದ್ದೆಯನ್ನು ಹೊಂದಿರುವ ಯಾವುದೇ ವ್ಯಕ್ತಿಯಿಂದ ನೆರವೇರಿಸುವ ಕರ್ತವ್ಯಗಳು; ಅಥವಾ

(ಸಿ) ಕೆಂದ್ರ ಸರ್ಕಾರ ಅಥವಾ ಒಂದು ರಾಜ್ಯ ಸರ್ಕಾರ ಅಥವಾ ಸ್ಥಳೀಯ ಪ್ರಾಧಿಕಾರದಿಂದ ಸ್ಥಾಪಿತವಾಗಿರುವ ಒಂದು ಸಂಸ್ಥೆಯಲ್ಲಿ ಒಬ್ಬ ಮುಖ್ಯಸ್ಥನಾಗಿರುವ ಅಥವಾ ಒಬ್ಬ ಸದಸ್ಯನಾಗಿರುವ ಅಥವಾ ಒಬ್ಬ ನಿರ್ದೇಶಕನಾಗಿರುವ ಮತ್ತು ಈ ಖಂಡದ ಪ್ರಾರಂಭಗೊಳ್ಳುವಿಕೆಯ ಮುನ್ನ ಒಬ್ಬ ಉದ್ಯೋಗಿ ಎಂದು ಪರಿಭಾವಿತನಾಗದಿರುವ, ಯಾವುದೇ ವ್ಯಕ್ತಿಯಿಂದ ನೆರವೇರಿಸುವ ಕರ್ತವ್ಯಗಳು.

4. ಮೃತನ ಸಾಗಾಣಿಕೆಯನ್ನು ಒಳಗೊಂಡಂತೆ, ಅಂತ್ಯಕ್ರಿಯೆ, ಶವಸಂಸ್ಕಾರ, ಚಿತಾಗಾರ, ಅಥವಾ ಶವಾಗಾರದ ಸೇವೆಗಳು.

5. ಭೂಮಿಯ ಮಾರಾಟ ಮತ್ತು ಅನುಸೂಚಿ IIರ ಖಂಡಿಕೆ 5ರ ಖಂಡ (ಬಿ)ಗೆ ಒಳಪಟ್ಟಂತೆ ಕಟ್ಟಡದ ಮಾರಾಟ.

6. ಲಾಟರಿ, ಬೆಟ್ಟಿಂಗ್ ಮತ್ತು ಜೂಜನ್ನು ಹೊರತುಪಡಿಸಿದ ಕ್ರಮಾರ್ಹ ಕ್ಲೇಮುಗಳು.

7. ಸರಕುಗಳು ಭಾರತದೊಳಗೆ ಪ್ರವೇಶಿಸದೇ, ಭಾರತದ ಹೊರಗಿನ ಒಂದು ಸ್ಥಳದಿಂದ ಭಾರತದ ಹೊರಗಿನ ಮತ್ತೊಂದು ಸ್ಥಳಕ್ಕೆ ಅಂಥ ಸರಕುಗಳ ಪೂರೈಕೆ.

8. (ಎ) ದೇಶೀಯ ಬಳಕೆಗಾಗಿ ತೀರುವೆಯಾಗುವುದಕ್ಕೆ ಮುಂಚಿತವಾಗಿ, ಯಾವುದೇ ವ್ಯಕ್ತಿಗೆ ಉಗ್ರಾಣಿತ ಸರಕುಗಳ ಪೂರೈಕೆ;

(ಬಿ) ಭಾರತದ ಹೊರಗಿನ ಮೂಲಬಂದರಿನಿAದ ಸರಕುಗಳು ರವಾನೆಯಾದ ನಂತರ, ಆದರೆ ದೇಶೀಯ ಬಳಕೆಗಾಗಿ ತೀರುವೆಯಾಗುವುದಕ್ಕೆ ಮುಂಚಿತವಾಗಿ, ಸರಕುಗಳ ಸ್ವಾಮ್ಯದ ದಸ್ತಾವೇಜುಗಳ ಹಿಂಬರಹದ ಮೂಲಕ ರವಾನೆದಾರನಿಂದ ಯಾವುದೇ ಇತರ ವ್ಯಕ್ತಿಗೆ ಸರಕುಗಳ ಪೂರೈಕೆ

(9) ವಿಮೆದಾರರು ಪಾವತಿಸಿದ ಕಂತಿನ ಸಂಪರ್ಣ ಮೊತ್ತದ ಮೇಲೆ ಪ್ರಮುಖ ವಿಮಾದಾರರು ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಕೇಂದ್ರಾಡಳಿತ ಪ್ರದೇಶ ತೆರಿಗೆ ಮತ್ತು ಏಕೀಕೃತ ತೆರಿಗೆಯನ್ನು ಸಂದಾಯ ಮಾಡುವ ಷರತ್ತಿಗೊಳಪಟ್ಟು, ಸಹ-ವಿಮಾ ಒಪ್ಪಂದಗಳಲ್ಲಿ, ವಿಮಾದಾರರಿಗೆ, ಪ್ರಮುಖ ವಿಮಾದಾರರು ಮತ್ತು ಸಹ-ವಿಮಾದಾರರು ಜಂಟಿಯಾಗಿ ಒದಗಿಸಿದ ಸೇವೆಗಳಿಗೆ, ಪ್ರಮುಖ ವಿಮಾದಾರನಿಂದ, ಸಹ-ವಿಮಾದಾರನಿಗೆ ಸಹ-ವಿಮಾ ಕಂತಿನ ಹಂಚಿಕೆಯ ಚಟುವಟಿಕೆ.

(10) ವಿಮಾದಾರರಿಂದ ಮರುವಿಮಾದಾರರಿಗೆ, ಸದರಿ ಸೆಡಿಂಗ್ ಕಮಿಷನ್ ಅಥವಾ ರಿಇನ್ಸುರೆನ್ಸ್ ಕಮೀಷನ್ ಅನ್ನು ಒಳಗೊಂಡಂತೆ ಸಂದಾಯ ಮಾಡಬೇಕಾದ ಒಟ್ಟು ಮರುವಿಮಾ ಕಂತಿನ ಮೇಲೆ, ಮರುವಿಮಾದಾರರಿಂದ ಕೇಂದ್ರ ತೆರಿಗೆ, ರಾಜ್ಯ ತೆರಿಗೆ, ಕೇಂದ್ರಾಡಳಿತ ತೆರಿಗೆ ಮತ್ತು ಏಕೀಕೃತ ತೆರಿಗೆಯನ್ನು ಸಂದಾಯ ಮಾಡಿದ ಷರತ್ತಿಗೆ ಒಳಪಟ್ಟು, ವಿಮಾದಾರರಿಂದ ಮರುವಿಮಾದಾರರಿಗೆ ಸಂದಾಯ ಮಾಡಿದ ಮರುವಿಮಾ ಕಂತಿನಿಂದ, ಸೆಡಿಂಗ್ ಕಮಿಷನ್ ಅಥವಾ ರಿಇನ್ಸುರೆನ್ಸ್ ಕಮೀಷನ್ ಅನ್ನು ಕಡಿತಗೊಳಿಸಲಾಗಿರುವ ವಿಮಾದಾರರಿಂದ, ಮರು-ವಿಮಾದಾರರಿಗೆ ಒದಗಿಸಿದ ಸೇವೆಗಳು.

ವಿವರಣೆ 1.- ಖಂಡಿಕೆ 2ರ ಉದ್ದೇಶಗಳಿಗಾಗಿ, "ನ್ಯಾಯಾಲಯ" ಎನ್ನುವ ಪದ ಜಿಲ್ಲಾ ನ್ಯಾಯಾಲಯ, ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯವನ್ನು ಒಳಗೊಳ್ಳುವುದು.

ವಿವರಣೆ 2.- ಖಂಡಿಕೆ 8ರ ಉದ್ದೇಶಗಳಿಗಾಗಿ, "ಉಗ್ರಾಣಿತ ಸರಕುಗಳು" ಎಂಬ ಪದಾವಳಿಯು ಸೀಮಾಸುಂಕಗಳ ಅಧಿನಿಯಮ, 1962ರಲ್ಲಿ (1962ರ ಕೇಂದ್ರ ಅಧಿನಿಯಮ 52) ಇದಕ್ಕೆ ನೀಡಲಾಗಿರುವ ಅರ್ಥವನ್ನೇ ಹೊಂದಿರತಕ್ಕದ್ದು.

XXX XXX XXX